ವರ್ಷನ್ ಕೋಡ್

**D3**

# ಸ್ಪರ್ಧಾತ್ಮಕ ಪರೀಕ್ಷೆ -2023

## ಸಾಮಾನ್ಯ ಜ್ಞಾನ : ಪತ್ರಿಕೆ-1

ಕ್ರಮ ಸಂಖ್ಯೆ

**4029772**

| ಪ್ರಶ್ನೆಪತ್ರಿಕೆ ಕೋಡ್ | ಅವಧಿ | ಒಟ್ಟು ಪ್ರಶ್ನೆಗಳ ಸಂಖ್ಯೆ | ನಿಮ್ಮ ನೋಂದಣಿ ಸಂಖ್ಯೆಯನ್ನು ನಮೂದಿಸಿ | | | | | | |
|---|---|---|---|---|---|---|---|---|---|
| 202308GK1 | ಎರಡು ಘಂಟೆಗಳು | 100 | | | | | | | |

### ಅಭ್ಯರ್ಥಿಗಳಿಗೆ ಸೂಚನೆಗಳು

**ಮಾಡಿ**

1. ಕೊಠಡಿ ಮೇಲ್ವಿಚಾರಕರು ಈ ಪ್ರಶ್ನೆಪತ್ರಿಕೆಯನ್ನು ನಿಮಗೆ ಎರಡನೇ ಬೆಲ್ ಆದ ನಂತರ ಕೊಡುತ್ತಾರೆ.
2. ನೊಂದಣಿ ಸಂಖ್ಯೆಯನ್ನು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಬರೆದು ಅದಕ್ಕೆ ಸಂಬಂಧಿಸಿದ ವೃತ್ತಗಳನ್ನು ಸಂಪೂರ್ಣವಾಗಿ ತುಂಬಿದ್ದೀರೆಂದು ಖಾತ್ರಿಪಡಿಸಿಕೊಳ್ಳತಕ್ಕದ್ದು.
3. ಪ್ರಶ್ನೆಪತ್ರಿಕೆಯ ವರ್ಷನ್ ಕೋಡ್ ಅನ್ನು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಬರೆದು ಅದಕ್ಕೆ ಸಂಬಂಧಿಸಿದ ವೃತ್ತಗಳನ್ನು ಸಂಪೂರ್ಣವಾಗಿ ತುಂಬಬೇಕು.
4. ಪ್ರಶ್ನೆ ಪತ್ರಿಕೆಯ ವರ್ಷನ್ ಕೋಡ್ ಮತ್ತು ಕ್ರಮ ಸಂಖ್ಯೆಯನ್ನು ನಾಮಿನಲ್ ರೋಲ್‌ನಲ್ಲಿ ತಪ್ಪಿಲ್ಲದೆ ಬರೆಯಬೇಕು.
5. ಓ.ಎಂ.ಆರ್. ಉತ್ತರ ಪತ್ರಿಕೆಯ ಕೆಳಭಾಗದ ನಿಗದಿತ ಜಾಗದಲ್ಲಿ ಪೂರ್ಣ ಸಹಿ ಮಾಡಬೇಕು.

**ಮಾಡಬೇಡಿ**

1. **ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಮುದ್ರಿತವಾಗಿರುವ ಟೈಮಿಂಗ್ & ಮಾರ್ಕ್‌ನ್ನು ತಿದ್ದಬಾರದು / ಹಾಳುಮಾಡಬಾರದು / ಅಳಿಸಬಾರದು.**
2. **ಮೂರನೇ ಬೆಲ್ ಆಗುವವರೆಗೂ,**
   - ಪ್ರಶ್ನೆ ಪತ್ರಿಕೆಯ ಬಲಭಾಗದಲ್ಲಿರುವ ಸೀಲ್ ಅನ್ನು ತೆಗೆಯಬಾರದು.
   - ಪ್ರಶ್ನೆ ಪತ್ರಿಕೆಯ ಒಳಗಡೆ ಇರುವ ಪ್ರಶ್ನೆಗಳನ್ನು ನೋಡಲು ಪ್ರಯತ್ನಿಸಬಾರದು ಅಥವಾ ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಉತ್ತರಿಸಲು ಪ್ರಾರಂಭಿಸಬಾರದು.

### ಅಭ್ಯರ್ಥಿಗಳಿಗೆ ಮುಖ್ಯ ಸೂಚನೆಗಳು

1. ಪ್ರಶ್ನೆಗಳಲ್ಲಿ ಬಳಸಿರುವ signs and symbols ಗಳನ್ನು, ಬೇರೆ ರೀತಿಯಲ್ಲಿ ಹೇಳದ ಹೊರತು, ನಿಗದಿತ ಪಠ್ಯಪುಸ್ತಕದಲ್ಲಿನ ಅರ್ಥವನ್ನು ಪರಿಗಣಿಸಬೇಕು.
2. ಪ್ರಶ್ನೆ ಪತ್ರಿಕೆಯಲ್ಲಿ ಒಟ್ಟು **100** ಪ್ರಶ್ನೆಗಳಿದ್ದು, ಪ್ರತಿ ಪ್ರಶ್ನೆಗೂ **4** ಬಹು ಆಯ್ಕೆ ಉತ್ತರಗಳು ಇರುತ್ತವೆ. ಪ್ರತಿ ಪ್ರಶ್ನೆಯ ಕೆಳಗೆ ಕೊಟ್ಟಿರುವ ನಾಲ್ಕು ಬಹು ಆಯ್ಕೆಯ ಉತ್ತರಗಳಲ್ಲಿ ಸರಿಯಾದ ಒಂದು ಉತ್ತರವನ್ನು ಆಯ್ಕೆ ಮಾಡಿ.
3. ಮೂರನೇ ಬೆಲ್ ನಂತರ ಪ್ರಶ್ನೆ ಪತ್ರಿಕೆಯ ಬಲಭಾಗದಲ್ಲಿರುವ ಸೀಲ್ ತೆಗೆದು ಈ ಪ್ರಶ್ನೆ ಪತ್ರಿಕೆಯಲ್ಲಿ ಯಾವುದೇ ಪುಟಗಳು ಮುದ್ರಿತವಾಗಿಲ್ಲದೇ ಇರುವುದು ಕಂಡು ಬಂದಲ್ಲಿ ಅಥವಾ ಹರಿದು ಹೋಗಿದ್ದಲ್ಲಿ ಅಥವಾ ಯಾವುದೇ ಅಕ್ಷರಗಳು ಬಿಟ್ಟುಹೋಗಿದ್ದಲ್ಲಿ ಎಂಬುದನ್ನು ಖಚಿತಪಡಿಸಿಕೊಂಡು, ಈ ರೀತಿ ಆಗಿದ್ದರೆ ಕೂಡಲೇ ಪ್ರಶ್ನೆಪತ್ರಿಕೆಯನ್ನು ಬದಲಾಯಿಸಿಕೊಳ್ಳುವುದು ನಂತರ ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಉತ್ತರಿಸಲು ಪ್ರಾರಂಭಿಸುವುದು.
4. ಪ್ರಶ್ನೆ ಪತ್ರಿಕೆಯಲ್ಲಿನ ಪ್ರಶ್ನೆಗೆ ಅನುಗುಣವಾಗಿರುವ ಸರಿ ಉತ್ತರವನ್ನು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಅದೇ ಕ್ರಮ ಸಂಖ್ಯೆಯ ಮುಂದೆ ನೀಡಿರುವ ಸಂಬಂಧಿಸಿದ ವೃತ್ತವನ್ನು **ನೀಲಿ ಅಥವಾ ಕಪ್ಪು** ಶಾಯಿಯ ಬಾಲ್ ಪಾಯಿಂಟ್ ಪೆನ್‌ನಿಂದ ಸಂಪೂರ್ಣ ತುಂಬುವುದು.

| ಸರಿಯಾದ ಕ್ರಮ CORRECT METHOD | ತಪ್ಪು ಕ್ರಮಗಳು WRONG METHODS |
|---|---|
| Ⓐ ● Ⓒ Ⓓ | (scribbled) Ⓑ Ⓒ Ⓓ   Ⓐ Ⓑ Ⓒ (ticked D)   Ⓐ ● ● Ⓓ |
| | (dot) Ⓑ Ⓒ Ⓓ   Ⓐ ◉ Ⓒ Ⓓ |

5. ಈ ಓ.ಎಂ.ಆರ್. ಉತ್ತರ ಪತ್ರಿಕೆಯನ್ನು ಸ್ಕ್ಯಾನ್ ಮಾಡುವ ಸ್ಕ್ಯಾನರ್ ಬಹಳ ಸೂಕ್ಷ್ಮವಾಗಿದ್ದು ಸಣ್ಣ ಗುರುತನ್ನು ಸಹ ದಾಖಲಿಸುತ್ತದೆ. ಆದ್ದರಿಂದ ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಉತ್ತರಿಸುವಾಗ ಎಚ್ಚರಿಕೆ ವಹಿಸಿ.
6. ಪ್ರಶ್ನೆ ಪತ್ರಿಕೆಯಲ್ಲಿ ಕೊಟ್ಟಿರುವ ಖಾಲಿ ಜಾಗವನ್ನು ರಫ್ ಕೆಲಸಕ್ಕೆ ಉಪಯೋಗಿಸಿ. ಓ.ಎಂ.ಆರ್. ಉತ್ತರ ಪತ್ರಿಕೆಯನ್ನು ಇದಕ್ಕೆ ಉಪಯೋಗಿಸಬೇಡಿ.
7. ಕೊನೆಯ ಬೆಲ್ ಆದ ನಂತರ ಉತ್ತರಿಸುವುದನ್ನು ನಿಲ್ಲಿಸಿ, ಓ.ಎಂ.ಆರ್. ಉತ್ತರ ಪತ್ರಿಕೆಯನ್ನು ಕೊಠಡಿ ಮೇಲ್ವಿಚಾರಕರಿಗೆ ಯಥಾಸ್ಥಿತಿಯಲ್ಲಿ ನೀಡಿರಿ.
8. ಕೊಠಡಿ ಮೇಲ್ವಿಚಾರಕರು ಮೇಲ್ಭಾಗದ ಹಾಳೆಯನ್ನು ಪ್ರತ್ಯೇಕಿಸಿ(ಕಚೇರಿ ಪ್ರತಿ) ತನ್ನ ವಶದಲ್ಲಿ ಇಟ್ಟುಕೊಂಡು ತಳಬದಿಯ ಯಥಾಪ್ರತಿಯನ್ನು(ಅಭ್ಯರ್ಥಿ ಪ್ರತಿ) ಅಭ್ಯರ್ಥಿಗಳಿಗೆ ಕೊಡುತ್ತಾರೆ.
9. ಎಲ್ಲಾ ಪ್ರಶ್ನೆಗಳಿಗೆ ಸಮಾನ ಅಂಕಗಳಿರುತ್ತದೆ. ಪ್ರತಿ ತಪ್ಪು ಉತ್ತರಕ್ಕೆ ನಿಗದಿಪಡಿಸಿದ ಅಂಕಗಳ 1/4 (0.25) ರಷ್ಟು ಅಂಕಗಳನ್ನು ಕಳೆಯಲಾಗುವುದು.
10. ಯಾವುದೇ ರೀತಿಯ ಮೊಬೈಲ್ ಫೋನ್, ಕ್ಯಾಲ್ಕುಲೇಟರ್ ಮತ್ತು ಇತರೆ ರೀತಿಯ ಎಲೆಕ್ಟ್ರಾನಿಕ್/ಕಮ್ಯುನಿಕೇಷನ್ ಸಾಧನಗಳು ಇತ್ಯಾದಿಗಳನ್ನು ಪರೀಕ್ಷಾ ಕೇಂದ್ರದ ಆವರಣದೊಳಗೆ ತರುವುದನ್ನು ನಿಷೇಧಿಸಿದೆ.

**ಸೂಚನೆ : ಕನ್ನಡ ಆವೃತ್ತಿಯ ಪ್ರಶ್ನೆಗಳಲ್ಲಿ ಉತ್ತರಿಸುವ ಅಭ್ಯರ್ಥಿಗಳಿಗೆ ಕನ್ನಡದಲ್ಲಿ ಮುದ್ರಿತವಾಗಿರುವ ಪ್ರಶ್ನೆಗಳ ಬಗ್ಗೆ ಏನಾದರೂ ಸಂದೇಹವಿದ್ದಲ್ಲಿ ಇಂಗ್ಲೀಷ್ ಆವೃತ್ತಿಯ ಪ್ರಶ್ನೆಪತ್ರಿಕೆಯನ್ನು ನೋಡಬಹುದು. ಏನಾದರೂ ವ್ಯತ್ಯಾಸ ಕಂಡುಬಂದಲ್ಲಿ ಇಂಗ್ಲೀಷ್ ಆವೃತ್ತಿಯನ್ನು ಅಂತಿಮ ಎಂದು ಪರಿಗಣಿಸಲಾಗುವುದು.**



Foresightiknas.com

CONFIDENTIAL

ಭಗತ್ ಸಿಂಗ್ ಮುದ್ದಾಪೂರ್. Nov 19, 2023, 12:36

Scanned with OKEN Scanner

1. Which of the following statement is wrong with reference to Vikram – S ?

(A) The mission was titled 'Prarambh'.

(B) It is India's first privately developed rocket.

(C) It was launched by DRDO.

(D) It was launched from Sriharikota.

2. 25th 'National Conference on e-Governance' was hosted by Jammu and Kashmir in November 2022. The conference was held in which place ?

(A) Jammu (B) Katra (C) Srinagar (D) Udhampur

3. Recently the foundation stone was laid for Indian Air Force's new airbase at Deesa located mere 130 kilometers from the Indo-Pak border. Deesa is in which State/Union Territory ?

(A) Gujarat (B) Jammu and Kashmir

(C) Rajasthan (D) Punjab

Forestgtkas.com

4. Which of the following statement is/are correct with respect to India's G-20 presidency :

i. The theme is "Vasudhaiva Kutumbakam".

ii. Below G-20 logo is "India" written in English Script.

iii. India assumed the G-20 presidency on 01.12.2022 from Indonesia.

iv. The theme is "Satyam Shivam Sundaram".

(A) All of these (B) i and iii only (C) ii and iv only (D) iii only

5. Which of the following Government of India enterprise under the Ministry of Defence unveiled three new missiles at the Aero India-2023 ?

(A) Gliders India Limited (B) Bharat Electronics Limited

(C) Bharat Dynamics Limited (D) Hindustan Aeronautics Limited

6. Which of the following is not the approved mission of ISRO ?

(A) SPADEX (B) ADITYA – L1 (C) NISAR (D) DAVINCI

Space For Rough Work

ಮಂಗಳ ಓಂ ಮುದ್ರಣ
Nov 19, 2023, 12:36

Scanned with OKEN Scanner

1. ವಿಕ್ರಮ್ – ಎಸ್ ಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆ ತಪ್ಪಾಗಿದೆ ?

(A) ಈ ಮಿಷನ್ನಿಗೆ 'ಪ್ರಾರಂಭ್' ಎಂಬ ಹೆಸರಿಡಲಾಗಿತ್ತು.

(B) ಇದು ಭಾರತದ ಪ್ರಥಮ ಖಾಸಗಿಯಾಗಿ ಸಿದ್ಧಪಡಿಸಿದ ರಾಕೆಟ್ ಆಗಿದೆ.

(C) ಇದನ್ನು ಡಿಆರ್‌ಡಿಓ ಉಡಾಯಿಸಿತು.

(D) ಇದನ್ನು ಶ್ರೀಹರಿಕೋಟಾದಿಂದ ಉಡಾಯಿಸಲಾಯಿತು.

2. 25ನೇ ರಾಷ್ಟ್ರೀಯ ಇ-ಆಡಳಿತ ಸಮ್ಮೇಳನವನ್ನು ನವೆಂಬರ್ 2022 ರಲ್ಲಿ ಜಮ್ಮು ಮತ್ತು ಕಾಶ್ಮೀರವು ಆಯೋಜಿಸಿತ್ತು. ಈ ಸಮ್ಮೇಳನವು ಯಾವ ಸ್ಥಳದಲ್ಲಿ ಆಯೋಜಿತವಾಗಿತ್ತು ?

(A) ಜಮ್ಮು (B) ಕತ್ರಾ (C) ಶ್ರೀನಗರ (D) ಉಧಂಪುರ

3. ಇತ್ತೀಚೆಗೆ ಭಾರತೀಯ ವಾಯುಪಡೆಯ ಹೊಸ ವಾಯುನೆಲೆಗೆ ಅಡಿಗಲ್ಲನ್ನು ಡೀಸಾದಲ್ಲಿ ಹಾಕಲಾಗಿದ್ದು ಇದು ಭಾರತ – ಪಾಕಿಸ್ತಾನ ಗಡಿಯಿಂದ ಕೇವಲ 130 ಕಿಲೋಮೀಟರ್ ದೂರದಲ್ಲಿದೆ. ಡೀಸಾ ಯಾವ ರಾಜ್ಯ/ ಕೇಂದ್ರಾಡಳಿತ ಪ್ರದೇಶದಲ್ಲಿದೆ ?

(A) ಗುಜರಾತ್ (B) ಜಮ್ಮು ಮತ್ತು ಕಾಶ್ಮೀರ (C) ರಾಜಸ್ಥಾನ (D) ಪಂಜಾಬ್

4. ಭಾರತದ ಜಿ – 20 ಅಧ್ಯಕ್ಷತೆಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆ/ಹೇಳಿಕೆಗಳು ಸರಿಯಾಗಿದೆ/ವೆ ?

i. ಇದರ ಧ್ಯೇಯ ವಾಕ್ಯ "ವಸುಧೈವ ಕುಟುಂಬಕಂ".

ii. ಜಿ-20 ಲಾಂಛನದ ಕೆಳಗೆ ಇಂಗ್ಲೀಷಿನಲ್ಲಿ "ಇಂಡಿಯಾ" ಎಂದು ಬರೆಯಲಾಗಿದೆ.

iii. 01.12.2022 ರಂದು ಇಂಡೋನೇಷಿಯಾದಿಂದ ಭಾರತವು ಜಿ-20 ಅಧ್ಯಕ್ಷತೆಯನ್ನು ವಹಿಸಿಕೊಂಡಿತು.

iv. ಇದರ ಧ್ಯೇಯ ವಾಕ್ಯ "ಸತ್ಯಂ ಶಿವಂ ಸುಂದರಂ".

(A) ಇವೆಲ್ಲವೂ (B) i ಮತ್ತು iii ಮಾತ್ರ (C) ii ಮತ್ತು iv ಮಾತ್ರ (D) iii ಮಾತ್ರ

5. ಭಾರತ ಸರ್ಕಾರದ ರಕ್ಷಣಾ ಸಚಿವಾಲಯದ ವ್ಯಾಪ್ತಿಯಲ್ಲಿ ಬರುವ ಈ ಕೆಳಗಿನ ಯಾವ ಉದ್ಯಮವು ಏರೋ – ಇಂಡಿಯಾ – 2023 ರಲ್ಲಿ ಮೂರು ಹೊಸ ಕ್ಷಿಪಣಿಗಳನ್ನು ಅನಾವರಣಗೊಳಿಸಿತು ?

(A) ಗ್ಲೈಡರ್ಸ್ ಇಂಡಿಯಾ ಲಿಮಿಟೆಡ್ (B) ಭಾರತ್ ಇಲೆಕ್ಟ್ರಾನಿಕ್ಸ್ ಲಿಮಿಟೆಡ್

(C) ಭಾರತ್ ಡೈನಮಿಕ್ಸ್ ಲಿಮಿಟೆಡ್ (D) ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್

6. ಈ ಕೆಳಗಿನವುಗಳಲ್ಲಿ ಯಾವುದು ಇಸ್ರೋದ ಅನುಮೋದಿತ ಮಿಷನ್ ಆಗಿಲ್ಲ ?

(A) SPADEX (B) ADITYA – L1 (C) NISAR (D) DAVINCI

**Space For Rough Work**



Foresightkas.com
ಭಗತ್ ಸಿಂಗ್ ಮುದ್ದಾಪೂರ್. Nov 19, 2023, 12:36
Scanned with OKEN Scanner

7. Which of the following statement is wrong with reference to Mission Amrit Sarovar ?

(A) None of these

(B) Every Amrit Sarovar will have a pondage area of at least 1 acre.

(C) Every district of the country will construct at least 100 Amrit Sarovars.

(D) Every Amrit Sarovar will be surrounded by trees like Neem, Peepal etc.

8. United Nations Environment Program (UNEP) signed a memorandum of understanding with National Cadet Corps (NCC) to tackle which of the following problems ?

(A) All of these (B) Air pollution (C) Noise pollution (D) Plastic pollution

9. Hari Balakrishnan, a computer scientist was recently awarded with which of the following Award/Prize ?

(A) Albert Einstein Prize (B) Marconi Prize

(C) India Science Award (D) Ho Chi Minh Prize

10. Name the world famous space scientist who despite being paralysed for nearly three decades took a zero gravity flight in 2007.

(A) Mohamed Elbaradel (B) Stephen Hawking

(C) Jerry Shay (D) Abdus Salem

Foresightkas.com

11. National Highways Authority of India (NHAI) created the Guinness World Record for the longest continuously laid lane of 75 kilometers. It is constructed between which two districts in Maharashtra ?

(A) Akola and Amravati (B) Ahmednagar and Akola

(C) Amravati and Latur (D) Nashik and Nagpur

12. The recently inaugurated National Tribal Research Institute is located in which city ?

(A) Shillong (B) New Delhi (C) Raipur (D) Kohima

13. King Charles III is the new monarch of Australia and New Zealand. Who was the first monarch of Australia and New Zealand ?

(A) George II (B) Edward VII (C) Edward VIII (D) George VI

Space For Rough Work

D3



Nov 19, 2023, 12:36

Scanned with OKEN Scanner

7. ಅಮೃತ ಸರೋವರ ಮಿಷನ್ನಿಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆ ತಪ್ಪಾಗಿದೆ ?
(A) ಇವುಗಳಲ್ಲಿ ಯಾವುದೂ ಅಲ್ಲ
(B) ಪ್ರತಿ ಅಮೃತ ಸರೋವರದ ವಿಸ್ತೀರ್ಣ ಕನಿಷ್ಟ 1 ಎಕರೆಯಾಗಿರುತ್ತದೆ.
(C) ದೇಶದ ಪ್ರತಿ ಜಿಲ್ಲೆಯಲ್ಲಿ ಕನಿಷ್ಟ 100 ಅಮೃತ ಸರೋವರಗಳನ್ನು ನಿರ್ಮಿಸಬೇಕಾಗುತ್ತದೆ.
(D) ಪ್ರತಿ ಅಮೃತ ಸರೋವರವು ಬೇವು, ಅರಳಿ ಮುಂತಾದ ಮರಗಳಿಂದ ಸುತ್ತುವರೆದಿರುತ್ತದೆ.

8. ವಿಶ್ವಸಂಸ್ಥೆಯ ಪರಿಸರ ಕಾರ್ಯಕ್ರಮ (UNEP) ನ್ಯಾಷನಲ್ ಕೆಡೆಟ್ ಕಾರ್ಪ್ಸ್ (NCC)ನೊಂದಿಗೆ ಈ ಕೆಳಗಿನ ಯಾವ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಒಡಂಬಡಿಕೆ ಮಾಡಿಕೊಂಡಿದೆ ?
(A) ಇವೆಲ್ಲವೂ (B) ವಾಯು ಮಾಲಿನ್ಯ (C) ಶಬ್ದ ಮಾಲಿನ್ಯ (D) ಪ್ಲಾಸ್ಟಿಕ್ ಮಾಲಿನ್ಯ

9. ಕಂಪ್ಯೂಟರ್ ವಿಜ್ಞಾನಿಯಾದ ಹರಿ ಬಾಲಕೃಷ್ಣನ್‌ರವರಿಗೆ ಇತ್ತೀಚೆಗೆ ಈ ಕೆಳಗಿನ ಯಾವ ಪ್ರತಿಷ್ಠಿತ ಪ್ರಶಸ್ತಿ/ಪುರಸ್ಕಾರವನ್ನು ನೀಡಿ ಗೌರವಿಸಲಾಗಿದೆ ?
(A) ಆಲ್ಬರ್ಟ್ ಐನ್‌ಸ್ಟೀನ್ ಪ್ರಶಸ್ತಿ (B) ಮಾರ್ಕೋನಿ ಪ್ರಶಸ್ತಿ
(C) ಭಾರತ ವಿಜ್ಞಾನ ಪ್ರಶಸ್ತಿ (D) ಹೋ ಚೀ ಮಿನ್ ಪ್ರಶಸ್ತಿ

10. ಸುಮಾರು ಮೂರು ದಶಕಗಳ ಕಾಲ ಪಾರ್ಶ್ವವಾಯುವಿಗೆ ಒಳಗಾಗಿದ್ದರೂ ಸಹ, 2007 ರಲ್ಲಿ ಶೂನ್ಯ ಗುರುತ್ವಾಕರ್ಷಣೆ ಫ್ಲೈಟ್ (zero gravity flight) ನಡೆಸಿದ ವಿಶ್ವಪ್ರಸಿದ್ಧ ಬಾಹ್ಯಾಕಾಶ ವಿಜ್ಞಾನಿಯನ್ನು ಹೆಸರಿಸಿ.
(A) ಮೊಹಮದ್ ಎಲ್ಬರಾಡೆಲ್ (B) ಸ್ಟಿಫೆನ್ ಹಾಕಿಂಗ್
(C) ಜೆರ್ರಿ ಶೇ (D) ಅಬ್ದುಸ್ ಸಲೇಮ್

11. ಭಾರತದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು (NHAI) 75 ಕಿ.ಮೀ. ನಿರಂತರವಾಗಿ ಒಂದೇ ಪಥದಲ್ಲಿ ರಸ್ತೆ ನಿರ್ಮಿಸಿ ಗಿನ್ನಿಸ್ ವಿಶ್ವ ದಾಖಲೆಯನ್ನು ಸೃಷ್ಟಿಸಿತು. ಈ ಪಥವನ್ನು ಮಹಾರಾಷ್ಟ್ರದ ಯಾವ ಎರಡು ಜಿಲ್ಲೆಗಳ ಮಧ್ಯೆ ನಿರ್ಮಿಸಲಾಗಿದೆ ?
(A) ಅಕೋಲಾ ಮತ್ತು ಅಮರಾವತಿ (B) ಅಹ್ಮದ್‌ನಗರ ಮತ್ತು ಅಕೋಲಾ
(C) ಅಮರಾವತಿ ಮತ್ತು ಲಾತೂರ್ (D) ನಾಸಿಕ್ ಮತ್ತು ನಾಗ್ಪುರ

12. ಇತ್ತೀಚೆಗೆ ಉದ್ಘಾಟನೆಗೊಂಡ ರಾಷ್ಟ್ರೀಯ ಬುಡಕಟ್ಟು ಸಂಶೋಧನಾ ಸಂಸ್ಥೆ ಯಾವ ನಗರದಲ್ಲಿದೆ ?
(A) ಶಿಲ್ಲಾಂಗ್ (B) ನವ ದೆಹಲಿ (C) ರಾಯ್‌ಪುರ್ (D) ಕೊಹಿಮಾ

13. ಕಿಂಗ್ ಚಾರ್ಲ್ಸ್ III ಆಸ್ಟ್ರೇಲಿಯಾ ಮತ್ತು ನ್ಯೂಜಿಲ್ಯಾಂಡಿನ ಹೊಸ ರಾಜರಾಗಿದ್ದಾರೆ. ಆಸ್ಟ್ರೇಲಿಯಾ ಮತ್ತು ನ್ಯೂಜಿಲ್ಯಾಂಡಿನ ಪ್ರಥಮ ರಾಜ ಯಾರಾಗಿದ್ದರು ?
(A) ಜಾರ್ಜ್ II (B) ಎಡ್ವರ್ಡ್ VII (C) ಎಡ್ವರ್ಡ್ VIII (D) ಜಾರ್ಜ್ VI

**Space For Rough Work**

Foresightkas.com
Nov 19, 2023, 12:36



Scanned with OKEN Scanner

14. The current RBI Governor (2023) is ______ .

(A) Shri Shaktikanta Das
(B) Dr. D. Subbarao
(C) Dr. Raghuram Rajan
(D) Dr. Urjit R. Patel

15. All India services can be created by

(A) Parliament (B) President (C) UPSC (D) Prime Minister

16. Which gas is used as coolant in cold storages ?

(A) Chlorofluorocarbon
(B) Nitrogen
(C) Carbon dioxide
(D) Ammonia

17. Most of Oxygen on earth is produced by :

(A) Paddy fields (B) Grasses (C) Algae (D) Trees

18. Number of tiger reserves located in Karnataka are ______.

(A) 7 (B) 5 (C) 4 (D) 6

19. Reflex action in body is controlled by :

(A) Sympathetic Nervous System
(B) Sensory Nerves
(C) Central Nervous System
(D) Motor Nerves

20. Nobel prize was awarded to Einstein for :

(A) Theory of Bose-Einstein statistics
(B) Theory of relativity
(C) Theory of photoelectric effect
(D) Theory of special effect

21. Highest bridge (location) in India is ______ .

(A) Pomban Bridge
(B) Bandra-Worli Sea Link
(C) Howrah Bridge
(D) Chenab Bridge

22. The first Indian satellite, Aryabhatta, was launched in the year

(A) 1979 (B) 1972 (C) 1975 (D) 1976

Foresightkas.com

Space For Rough Work



ಮಂಗಳವಾರ ಶಂಗ್ ಚಿತ್ರಾಚಾರ್ಯ. Nov 19, 2023, 12:37

Scanned with OKEN Scanner

14. ಪ್ರಸ್ತುತ ಆರ್‌ಬಿಐ ರಾಜ್ಯಪಾಲರು (2023) ______ .

(A) ಶ್ರೀ ಶಕ್ತಿಕಾಂತ ದಾಸ್
(B) ಡಾ. ಡಿ. ಸುಬ್ಬರಾವ್
(C) ಡಾ. ರಘುರಾಮ್ ರಾಜನ್
(D) ಡಾ. ಉರ್ಜಿತ್ ಆರ್. ಪಟೇಲ್

15. ಎಲ್ಲಾ ಭಾರತೀಯ ಸೇವೆಗಳನ್ನು ______ ಮೂಲಕ ರಚಿಸಬಹುದು.

(A) ಸಂಸತ್ತು
(B) ರಾಷ್ಟ್ರಪತಿ
(C) ಯುಪಿಎಸ್‌ಸಿ
(D) ಪ್ರಧಾನ ಮಂತ್ರಿ

16. ಯಾವ ಅನಿಲವನ್ನು ಶೀತಲ ಶೇಖರಣೆಗಳಲ್ಲಿ (ಕೋಲ್ಡ್ ಸ್ಟೋರೇಜ್) ಶೀತಕವಾಗಿ ಬಳಸಲಾಗುತ್ತದೆ ?

(A) ಕ್ಲೋರೋಫ್ಲೂರೋ ಕಾರ್ಬನ್
(B) ಸಾರಜನಕ
(C) ಇಂಗಾಲದ ಡೈಯಾಕ್ಸೈಡ್
(D) ಅಮೋನಿಯ

17. ಭೂಮಿಯ ಮೇಲಿನ ಹೆಚ್ಚಿನ ಆಮ್ಲಜನಕವನ್ನು ______ ನಿಂದ ಉತ್ಪಾದಿಸಲಾಗುತ್ತದೆ.

(A) ಭತ್ತದ ಗದ್ದೆಗಳು
(B) ಹುಲ್ಲುಗಳು
(C) ಪಾಚಿ
(D) ಮರಗಳು

18. ಕರ್ನಾಟಕದಲ್ಲಿ, ಹುಲಿ ಸಂರಕ್ಷಿತ ಪ್ರದೇಶಗಳು ______ ಸಂಖ್ಯೆಯಲ್ಲಿವೆ.

(A) 7
(B) 5
(C) 4
(D) 6

19. ದೇಹದಲ್ಲಿ ಪ್ರತಿಫಲಿತ ಕ್ರಿಯೆಯನ್ನು ______ ನಿಂದ ನಿಯಂತ್ರಿಸಲಾಗುತ್ತದೆ.

(A) ಜೀವಿತಾಧಿಷ್ಠಾನ ನರಮಂಡಲ ವ್ಯವಸ್ಥೆ
(B) ಸಂವೇದನಾ ನರಗಳು
(C) ಕೇಂದ್ರ ನರಮಂಡಲ ವ್ಯವಸ್ಥೆ
(D) ಕ್ರಿಯಾವಾಹಕ ನರಗಳು

20. ನೊಬೆಲ್ ಪ್ರಶಸ್ತಿಯನ್ನು ಐನ್‌ಸ್ಟೇನ್‌ಗೆ ______ ಗಾಗಿ ನೀಡಲಾಯಿತು.

(A) ಬೋಸ್ – ಐನ್‌ಸ್ಟೇನ್ ಅಂಕಿ ಅಂಶಗಳ ಸಿದ್ಧಾಂತ
(B) ಸಾಪೇಕ್ಷತಾ ಸಿದ್ಧಾಂತ
(C) ದ್ಯುತಿವಿದ್ಯುತ್ ಪರಿಣಾಮದ ಸಿದ್ಧಾಂತ
(D) ವಿಶೇಷ ಪರಿಣಾಮದ ಸಿದ್ಧಾಂತ

21. ಭಾರತದ ಅತಿ ಎತ್ತರದ ಸೇತುವೆ (ಸ್ಥಳ) ______ .

(A) ಪೊಂಬನ್ ಸೇತುವೆ
(B) ಬಾಂದ್ರಾ – ವರ್ಲಿ ಸಮುದ್ರ ಜೋಡಣೆ
(C) ಹೌರಾ ಸೇತುವೆ
(D) ಚೆನಾಬ್ ಸೇತುವೆ

22. ಮೊದಲ ಭಾರತೀಯ ಉಪಗ್ರಹ, ಆರ್ಯಭಟವನ್ನು ______ ನಲ್ಲಿ ಉಡಾವಣೆ ಮಾಡಲಾಯಿತು.

(A) 1979
(B) 1972
(C) 1975
(D) 1976

**Space For Rough Work**

Foresightkaa.com

ಭಗತ್ ಸಿಂಗ್ ಮುದ್ಲಾಪೂರ್.
Nov 19, 2023, 12:37



Scanned with OKEN Scanner

23. When did the Kannada Sahitya Parishad come into existence ?
(A) 1921 (B) 1915 (C) 1917 (D) 1919

24. Name the year when the first Mughal occupations took place in Karnataka.
(A) 1657 (B) 1640 (C) 1645 (D) 1650

25. Scholars like Vasumitra, Ashwagosha and Nagarjuna lived in the court of
(A) Harshavardhana (B) Kanishka (C) Pulakeshi – II (D) Raja Raja – I

26. Nicolo Conti, an Italian traveller, visited Vijayanagara kingdom in 1420 in the reign of
(A) Sada Shivaraya (B) Krishnadevaraya (C) Deva Raya-I (D) Harihara

27. Sir Thomas Roe, the second embassy to the court of
(A) Shah Jahan (B) Akbar (C) Babar (D) Jehangir

28. Krishnadevaraya was also a great poet and was known as
(A) Viranarayana (B) Andhra Bhoja
(C) Immadi Devaraya (D) Gajabetakara

29. The Belur temple was constructed by Hoysala Vishnuvardhana to commemorate his victory over one of the following enemies :
(A) The Chalukyas (B) The Cholas (C) The Alupas (D) The Pandyas

30. Arrange the Diwans of Mysore given below in a chronological order :
1. Arcot Ramaswamy Mudaliar
2. Sir M. Visvesarayya
3. P. Krishnamurthy
4. Mirza Ismail

(A) 3, 4, 1, 2 (B) 1, 2, 3, 4 (C) 1, 3, 2, 4 (D) 3, 2, 4, 1

31. Which of the following persons was the Reception Committee Chairman for the Belgaum National Congress Session held in 1924 ?
(A) Gangadhar Rao Deshpande (B) Dr. Hardikar
(C) Karnad Sadashiva Rao (D) S. Nijalingappa

Space For Rough Work

Foresightkas.com



Scanned with OKEN Scanner

23. ಕನ್ನಡ ಸಾಹಿತ್ಯ ಪರಿಷತ್ತು ಯಾವಾಗ ಅಸ್ತಿತ್ವಕ್ಕೆ ಬಂದಿತು ?

(A) 1921 (B) 1915 (C) 1917 (D) 1919

24. ಕರ್ನಾಟಕದಲ್ಲಿ ಮೊದಲ ಮೊಘಲ್ ಅತಿಕ್ರಮಣ ನಡೆದ ವರ್ಷವನ್ನು ಗುರುತಿಸಿ.

(A) 1657 (B) 1640 (C) 1645 (D) 1650

25. ವಸುಮಿತ್ರ, ಅಶ್ವಘೋಷ ಮತ್ತು ನಾಗಾರ್ಜುನ ರಂತಹ ವಿದ್ವಾಂಸರು ______ ನ ಆಸ್ಥಾನದಲ್ಲಿದ್ದರು.

(A) ಹರ್ಷವರ್ಧನ (B) ಕನಿಷ್ಕ (C) ಪುಲಕೇಶಿ – II (D) ರಾಜ ರಾಜಾ – I

26. ನಿಕೋಲೊ ಕೊಂಟಿ ಎಂಬ ಇಟಲಿಯ ಪ್ರವಾಸಿ, 1420 ರಲ್ಲಿ ______ ರವರ ಆಡಳಿತ ಕಾಲದಲ್ಲಿ, ವಿಜಯನಗರ ಸಾಮ್ರಾಜ್ಯಕ್ಕೆ ಭೇಟಿ ನೀಡಿದ್ದನು.

(A) ಸದಾಶಿವರಾಯ (B) ಕೃಷ್ಣದೇವರಾಯ (C) ದೇವ ರಾಯ-I (D) ಹರಿಹರ

27. ಸರ್ ಥಾಮಸ್ ರೊಯ್, ______ ಆಸ್ಥಾನಕ್ಕೆ ಭೇಟಿ ನೀಡಿದ ಎರಡನೇ ರಾಯಭಾರಿ.

(A) ಷಹಜಹಾನ್ (B) ಅಕ್ಬರ್ (C) ಬಾಬರ್ (D) ಜಹಾಂಗೀರ್

28. ಕೃಷ್ಣದೇವರಾಯ ಸ್ವತಃ ಒಬ್ಬ ಮಹಾನ್ ಕವಿಯೂ ಆಗಿದ್ದು ______ ಎಂದು ಕರೆಯಲ್ಪಡುತ್ತಿದ್ದರು.

(A) ವೀರ ನಾರಾಯಣ (B) ಆಂಧ್ರ ಭೋಜ (C) ಇಮ್ಮಡಿ ದೇವರಾಯ (D) ಗಜಬೇಟಕಾರ

Foresightkas.com

29. ಬೇಲೂರು ದೇವಾಲಯವನ್ನು ಹೊಯ್ಸಳ ವಿಷ್ಣುವರ್ಧನನು ಈ ಕೆಳಗಿನ ಶತ್ರುಗಳಲ್ಲಿ ಒಬ್ಬನ ಮೇಲೆ ವಿಜಯದ ಸ್ಮರಣಾರ್ಥಕವಾಗಿ ನಿರ್ಮಿಸಿದನು.

(A) ಚಾಲುಕ್ಯರು (B) ಚೋಳರು (C) ಅಲುಪರು (D) ಪಾಂಡ್ಯರು

30. ಈ ಕೆಳಗಿನ ಮೈಸೂರಿನ ದಿವಾನರನ್ನು ಕಾಲಾನುಕ್ರಮದಲ್ಲಿ ಜೋಡಿಸಿ.

1. ಆರ್ಕೋಟ್ ರಾಮಸ್ವಾಮಿ ಮುದಲಿಯಾರ್
2. ಸರ್.ಎಮ್. ವಿಶ್ವೇಶ್ವರಯ್ಯ
3. ಪಿ. ಕೃಷ್ಣಮೂರ್ತಿ
4. ಮಿರ್ಜಾ ಇಸ್ಮಾಯಿಲ್

(A) 3, 4, 1, 2 (B) 1, 2, 3, 4 (C) 1, 3, 2, 4 (D) 3, 2, 4, 1

31. 1924 ರಲ್ಲಿ ನಡೆದ ಬೆಳಗಾವಿ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನಕ್ಕೆ ಈ ಕೆಳಗಿನವರುಗಳಲ್ಲಿ ಯಾರು ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದರು ?

(A) ಗಂಗಾಧರ್‌ರಾವ್ ದೇಶಪಾಂಡೆ
(B) ಡಾ. ಹರ್ಡೀಕರ್
(C) ಕಾರ್ನಾಡ್ ಸದಾಶಿವ ರಾವ್
(D) ಎಸ್. ನಿಜಲಿಂಗಪ್ಪ

Space For Rough Work



ಭಗತ್ ಸಿಂಗ್ ಮುದ್ನಾಳ್. Nov 19, 2023, 12:37
Scanned with OKEN Scanner

32. Karnataka extends to about ______ km from North to South and about ______ km from East to West.

(A) 750 and 400
(B) 770 and 480
(C) 710 and 450
(D) 740 and 425

33. Karnataka's total geographical area :

(A) 1,61,757 sq. km (B) 1,81,757 sq. km (C) 1,91,757 sq. km (D) 1,71,757 sq. km

34. Match following and select right one :

| | | | |
|---|---|---|---|
| 1. | Dharwad | a. | Kalyana Karnataka |
| 2. | Raichur | b. | Old Mysore |
| 3. | Mandya | c. | Coastal Karnataka |
| 4. | Karwar | d. | Kitturu Karnataka |

(A) 1-d, 2-a, 3-b & 4-c
(B) 1-b, 2-a, 3-c & 4-d
(C) 1-a, 2-c, 3-b & 4-d
(D) 1-d, 2-c, 3-b & 4-a

Foresightias.com

35. The river that forms boundary between Gundlupet of Chamarajanagar district and Udagamandalam district of Tamil Nadu is :

(A) Shimsha (B) Taraka (C) Meyar (D) Kabani

36. The three dramas authored by Harshavardhana

(A) Divyavadana, Lalitavistara, Milindapanho
(B) Shukranithi, Panchatantra, Mahabhashya
(C) Naganandha, Rathnavali, Priyadarshika
(D) Raghuvamsha, Malavikagnimitra, Rajatarangini

37. Karnataka state shares boundaries with how many states ?

(A) 7 (B) 4 (C) 5 (D) 6

38. The princely state of Mysuru came into existence :

(A) 1759 (B) 1799 (C) 1779 (D) 1769

Space For Rough Work

ತೆಗೆದ ಸಿಂಗ್ ಮಹ್ಮೂದ್. Nov 19, 2023, 12:37



Scanned with OKEN Scanner

32. ಕರ್ನಾಟಕವು ಉತ್ತರದಿಂದ ದಕ್ಷಿಣಕ್ಕೆ ಸುಮಾರು ______ ಕಿ.ಮೀ. ವರೆಗೆ ಮತ್ತು ಪೂರ್ವದಿಂದ ಪಶ್ಚಿಮಕ್ಕೆ ಸುಮಾರು ______ ಕಿ.ಮೀ. ವರೆಗೆ ವ್ಯಾಪಿಸಿದೆ.

(A) 750 ಮತ್ತು 400 (B) 770 ಮತ್ತು 480 (C) 710 ಮತ್ತು 450 (D) 740 ಮತ್ತು 425

33. ಕರ್ನಾಟಕದ ಒಟ್ಟು ಭೌಗೋಳಿಕ ಪ್ರದೇಶ

(A) 1,61,757 ಚ.ಕಿಮೀ. (B) 1,81,757 ಚ.ಕಿಮೀ. (C) 1,91,757 ಚ.ಕಿಮೀ. (D) 1,71,757 ಚ.ಕಿಮೀ.

34. ಕೆಳಗಿನವುಗಳನ್ನು ಹೊಂದಿಸಿ ಮತ್ತು ಸರಿಯಾದುದನ್ನು ಆಯ್ಕೆ ಮಾಡಿ.

| | | | |
|---|---|---|---|
| 1. | ಧಾರವಾಡ | a. | ಕಲ್ಯಾಣ ಕರ್ನಾಟಕ |
| 2. | ರಾಯಚೂರು | b. | ಹಳೇ ಮೈಸೂರು |
| 3. | ಮಂಡ್ಯ | c. | ಕರಾವಳಿ ಕರ್ನಾಟಕ |
| 4. | ಕಾರವಾರ | d. | ಕಿತ್ತೂರು ಕರ್ನಾಟಕ |

(A) 1-d, 2-a, 3-b ಮತ್ತು 4-c (B) 1-b, 2-a, 3-c ಮತ್ತು 4-d

(C) 1-a, 2-c, 3-b ಮತ್ತು 4-d (D) 1-d, 2-c, 3-b ಮತ್ತು 4-a

35. ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ಮತ್ತು ತಮಿಳುನಾಡಿನ ಉದಗಮಂಡಲಂ ಜಿಲ್ಲೆಯ ನಡುವಿನ ಗಡಿಯನ್ನು ರೂಪಿಸುವ ನದಿ ______.

(A) ಶಿಂಶ (B) ತಾರಕ (C) ಮೋಯರ್ (D) ಕಬನಿ

36. ರಾಜ ಹರ್ಷವರ್ಧನ ಬರೆದ ಮೂರು ನಾಟಕಗಳು

(A) ದಿವ್ಯವದನ, ಲಲಿತವಿಸ್ತಾರ, ಮಿಲಿಂದಪನ್ಹೊ

(B) ಶುಕ್ರನೀತಿ, ಪಂಚತಂತ್ರ, ಮಹಾಭಾಷ್ಯ

(C) ನಾಗಾನಂದ, ರತ್ನಾವಳಿ, ಪ್ರಿಯದರ್ಶಿಕ

(D) ರಘುವಂಶ, ಮಾಲವಿಕಾಗ್ನಿಮಿತ್ರ, ರಾಜತರಂಗಿಣಿ

37. ಕರ್ನಾಟಕ ರಾಜ್ಯ, ಎಷ್ಟು ರಾಜ್ಯಗಳೊಡನೆ ಗಡಿಯನ್ನು ಹಂಚಿಕೊಂಡಿದೆ ?

(A) 7 (B) 4 (C) 5 (D) 6

38. ರಾಜಪ್ರಭುತ್ವದ ಮೈಸೂರು ರಾಜ್ಯ/ಮೈಸೂರು ಸಂಸ್ಥಾನ ______ ರಲ್ಲಿ ಅಸ್ತಿತ್ವಕ್ಕೆ ಬಂದಿತು.

(A) 1759 (B) 1799 (C) 1779 (D) 1769

Space For Rough Work

Foresightkas.com



Scanned with OKEN Scanner

39. Arrange the following districts by their geographical area from largest to smallest :

Kolar, Bengaluru Urban, Kodagu, Udupi, Ramanagara and Bengaluru Rural

(A) Kolar, Kodagu, Udupi, Ramanagara, Bengaluru Rural, Bengaluru Urban

(B) Bengaluru Rural, Kodagu, Udupi, Kolar, Ramanagara, Bengaluru Urban

(C) Ramanagara, Bengaluru Rural, Udupi, Kolar, Bengaluru Urban, Kodagu

(D) Kodagu, Kolar, Udupi, Ramanagara, Bengaluru Rural, Bengaluru Urban

40. Read the following carefully and select right answer :

1. Larger part of the Karnataka state is a unique table land rising abruptly from coastal plains.
2. Karnataka plateau is formed recently.
3. The plateau of Karnataka is a part of peninsular plateau belonging to the ancient Gondwana landmass.
4. The large landmass of Karnataka belongs to one of the major shields of the earth.

(A) All the statements are right.

(B) 1st, 3rd and 4th statements are right and 2nd is wrong.

(C) 1st, 2nd, 3rd statements are right and 4th is wrong.

(D) 2nd, 3rd and 4th statements are right and 1st one is wrong.

ForesightKas.com

41. Read the following statements carefully and select the correct one pertaining to coastal Karnataka :

1. It is about 50-60 kms wide.
2. The average height of the coast is less than 200 meters from the Mean Sea Level (MSL).
3. Karnataka coast merges with Malabar coast in the North and Konkan coast in the South.
4. At the South Karnataka coast, Western Ghats are very closer and at the North, the Western Ghats are farther.

(A) All the statements are right.

(B) Above 1st & 2nd statements are wrong and below 3rd and 4th statements are right.

(C) Above 1st and 2nd statements are right and below 3rd & 4th statements are wrong.

(D) All the statements are wrong.

Space For Rough Work



ಭಗತ್ ಸಿಂಗ್ ಮುದ್ದುಪ್ಪ.
Nov 19, 2023, 12:38

Scanned with OKEN Scanner

39. ಕೆಳಗಿನ ಜಿಲ್ಲೆಗಳನ್ನು ಅವುಗಳ ಭೌಗೋಳಿಕ ಪ್ರದೇಶ ವಿಸ್ತಾರದ ಮೂಲಕ, ದೊಡ್ಡದಿಂದ ಚಿಕ್ಕದಕ್ಕೆ ಕ್ರಮಪಡಿಸಿ.
ಕೋಲಾರ, ಬೆಂಗಳೂರು ನಗರ, ಕೊಡಗು, ಉಡುಪಿ, ರಾಮನಗರ ಮತ್ತು ಬೆಂಗಳೂರು ಗ್ರಾಮೀಣ

(A) ಕೋಲಾರ, ಕೊಡಗು, ಉಡುಪಿ, ರಾಮನಗರ, ಬೆಂಗಳೂರು ಗ್ರಾಮೀಣ, ಬೆಂಗಳೂರು ನಗರ
(B) ಬೆಂಗಳೂರು ಗ್ರಾಮೀಣ, ಕೊಡಗು, ಉಡುಪಿ, ಕೋಲಾರ, ರಾಮನಗರ, ಬೆಂಗಳೂರು ನಗರ
(C) ರಾಮನಗರ, ಬೆಂಗಳೂರು ಗ್ರಾಮೀಣ, ಉಡುಪಿ, ಕೋಲಾರ, ಬೆಂಗಳೂರು ನಗರ, ಕೊಡಗು
(D) ಕೊಡಗು, ಕೋಲಾರ, ಉಡುಪಿ, ರಾಮನಗರ, ಬೆಂಗಳೂರು ಗ್ರಾಮೀಣ, ಬೆಂಗಳೂರು ನಗರ

40. ಕೆಳಗಿನವುಗಳನ್ನು ಸರಿಯಾಗಿ ಓದಿ ಮತ್ತು ಉತ್ತಮವಾದುದನ್ನು ಆಯ್ಕೆ ಮಾಡಿ.

1. ಕರ್ನಾಟಕದ ದೊಡ್ಡ ಭಾಗವು ಕರಾವಳಿ ಬಯಲು ಪ್ರದೇಶದಿಂದ ಥಟ್ಟನೆ ಏರುತ್ತಿರುವ ವಿಶಿಷ್ಟವಾದ ಟೇಬಲ್ ಪ್ರದೇಶವಾಗಿದೆ / ಪ್ರಸ್ಥಭೂಮಿ ಪ್ರದೇಶವಾಗಿದೆ.
2. ಕರ್ನಾಟಕ ಪ್ರಸ್ಥಭೂಮಿ ಇತ್ತೀಚೆಗೆ ರೂಪುಗೊಂಡಿದೆ.
3. ಕರ್ನಾಟಕದ ಪ್ರಸ್ಥಭೂಮಿಯು, ಪ್ರಾಚೀನ ಗೊಂಡ್ವಾನಾ ಭೂಪ್ರದೇಶಕ್ಕೆ ಸೇರಿದ ಪರ್ಯಾಯ ದ್ವೀಪದ ಪ್ರಸ್ಥಭೂಮಿಯ ಭಾಗವಾಗಿದೆ.
4. ಕರ್ನಾಟಕದ ದೊಡ್ಡ ಭೂಭಾಗವು ಭೂಮಿಯ ಪ್ರಮುಖ ಕವಚಗಳಲ್ಲಿ ಒಂದಾಗಿದೆ.

(A) ಎಲ್ಲಾ ಹೇಳಿಕೆಗಳು ಸರಿ.
(B) 1ನೇ, 3ನೇ ಮತ್ತು 4ನೇ ಹೇಳಿಕೆಗಳು ಸರಿ ಮತ್ತು 2ನೇಯದು ತಪ್ಪು.
(C) 1ನೇ, 2ನೇ ಮತ್ತು 3ನೇ ಹೇಳಿಕೆಗಳು ಸರಿ ಮತ್ತು 4ನೇಯದು ತಪ್ಪು.
(D) 2ನೇ, 3ನೇ ಮತ್ತು 4ನೇ ಹೇಳಿಕೆಗಳು ಸರಿ ಮತ್ತು 1ನೇಯದು ತಪ್ಪು.

Foresightias.com

41. ಕೆಳಗಿನ ಹೇಳಿಕೆಗಳನ್ನು ಸರಿಯಾಗಿ ಓದಿ, ಕರ್ನಾಟಕ ಕರಾವಳಿಗೆ ಸಂಬಂಧಿಸಿದ ಸರಿಯಾದುದನ್ನು ಆಯ್ಕೆ ಮಾಡಿ.

1. ಇದು ಸುಮಾರು 50-60 ಕಿ.ಮೀ. ಅಗಲವಿದೆ.
2. ಕರಾವಳಿಯ ಸರಾಸರಿ ಎತ್ತರವು, ಸರಾಸರಿ ಸಮುದ್ರ ಮಟ್ಟದಿಂದ 200 ಮೀ. ಗಿಂತ ಕಡಿಮೆಯಿದೆ.
3. ಕರ್ನಾಟಕ ಕರಾವಳಿಯು, ಉತ್ತರದಲ್ಲಿ ಮಲಬಾರ್ ಕರಾವಳಿ ಮತ್ತು ದಕ್ಷಿಣದಲ್ಲಿ ಕೊಂಕಣ ಕರಾವಳಿಯೊಂದಿಗೆ ವಿಲೀನಗೊಳ್ಳುತ್ತದೆ.
4. ದಕ್ಷಿಣ ಕರ್ನಾಟಕ ಕರಾವಳಿಯಲ್ಲಿ, ಪಶ್ಚಿಮ ಘಟ್ಟಗಳು ಬಹಳ ಹತ್ತಿರವಾಗಿದ್ದು ಮತ್ತು ಉತ್ತರ ದಿಕ್ಕಿನಲ್ಲಿ ಪಶ್ಚಿಮ ಘಟ್ಟಗಳು ದೂರವಾಗಿವೆ.

(A) ಎಲ್ಲಾ ಹೇಳಿಕೆಗಳು ಸರಿ.
(B) 1ನೇ ಮತ್ತು 2ನೇ ಹೇಳಿಕೆಗಳು ತಪ್ಪು, ಮತ್ತು 3ನೇ ಮತ್ತು 4ನೇ ಹೇಳಿಕೆಗಳು ಸರಿ.
(C) 1ನೇ ಮತ್ತು 2ನೇ ಹೇಳಿಕೆಗಳು ಸರಿ, ಮತ್ತು 3ನೇ ಮತ್ತು 4ನೇ ಹೇಳಿಕೆಗಳು ತಪ್ಪು.
(D) ಎಲ್ಲಾ ಹೇಳಿಕೆಗಳು ತಪ್ಪು.

**Space For Rough Work**



ಭಗತ್ ಸಿಂಗ್ ಮುದ್ದಾಪೂರ್. Nov 19, 2023, 12:38

Scanned with OKEN Scanner

42. The name of Asoka generally mentioned in his inscriptions

(A) Seema Seri
(B) Devanampiya Piyadasi
(C) Amritha Ghata
(D) Ajatha Shathru

43. An inscription on a pillar at Besnagar refers to

(A) Mahaparinibhana Sutlanta to erect stupa at the crossing of four highways - chatummahapathe.
(B) Dakphises – I, the leader of Kushans.
(C) Helidorus, the Greek ambassador.
(D) Kadphises – II, who established the Saka era.

44. During the Guptha period, land tax was the main source of revenue and was paid either in cash or kind. It was known as

(A) Samantha
(B) Bhagakara
(C) Uparika
(D) Panchamandala

45. Read the following statements :

Why coastal Karnataka has no large deltas comparing to the East coast of India ?

Select the right answer from below :

1. Due to most active south-west monsoons that produces waves of greater heights.
2. The waves of greater height wash the coast and carry down the riverine loads into the deep sea.
3. The west-flowing rivers never bring erosional load.
4. The coast of Karnataka largely of submergence.

(A) Due to all the statements.
(B) Due to 1st, 2nd and 4th statements.
(C) Due to 2nd, 3rd and 4th statements.
(D) Due to 1st, 2nd and 3rd statements.

Foresighkas.com

46. The Chaturvarna system is mentioned in the earlier hymns of Rig Veda 10th mandala of

(A) Jabala Upanishad
(B) Shatapatha Brahmana
(C) Taithariya Samhita
(D) Purusha Suktha

47. During later Vedic period, kings to establish themselves as Chakravarthin performed :

(A) Ashvamedha
(B) Jatakarma
(C) Samavartana
(D) Varuna Yajna

Space For Rough Work



ಭಗತ್ ಸಿಂಗ್ ಮಯ್ಯಾಪ್ಪರ್.
Nov 19, 2023, 12:38

Scanned with OKEN Scanner

42. ಅಶೋಕನ ಹೆಸರನ್ನು ಸಾಮಾನ್ಯವಾಗಿ ಅವನ ಶಾಸನಗಳಲ್ಲಿ______ ಎಂದು ಉಲ್ಲೇಖಿಸಲಾಗಿದೆ.
(A) ಸೀಮಾ ಸೆರಿ
(B) ದೇವನಾಂಪಿಯ ಪಿಯದಸಿ
(C) ಅಮೃತ ಗಾಥಾ
(D) ಅಜಾತ ಶತ್ರು

43. ಬೇಸ್‌ನಗರದಲ್ಲಿನ ಕಂಬದ ಮೇಲಿರುವ ಶಾಸನ ______ ಗೆ ಸಂಬಂಧಿಸಿದೆ.
(A) ಮಹಾಪರಿನಿಭಾನ ಸುತ್ತಾಂತಾ, ನಾಲ್ಕು ಹೆದ್ದಾರಿಗಳ ಛೇದನದಲ್ಲಿ ಸ್ತೂಪವನ್ನು ಸ್ಥಾಪಿಸಲು ಚತುಮ್ಮಹಾಪಥೆ.
(B) ಡಾಕ್ಫಿಸಸ್ – I, ಕುಷಾನರ ನಾಯಕ.
(C) ಹೆಲಿಡೋರಸ್, ಗ್ರೀಕ್ ರಾಯಭಾರಿ
(D) ಕ್ಯಾಡ್ಫಿಸಸ್ – II, ಶಕ ಯುಗವನ್ನು ಸ್ಥಾಪಿಸಿದವನು.

44. ಗುಪ್ತರ ಅವಧಿಯಲ್ಲಿ, ಭೂ ಕಂದಾಯವು ಆದಾಯದ ಮುಖ್ಯ ಮೂಲವಾಗಿತ್ತು. ಮತ್ತು ನಗದು ಅಥವಾ ವಸ್ತುವಿನ ರೂಪದಲ್ಲಿ ಪಾವತಿಸಲಾಗುತ್ತಿದ್ದು, ಇದನ್ನು______ ಎಂದು ಕರೆಯಲಾಗುತ್ತಿತ್ತು.
(A) ಸಮಂತಾ
(B) ಭಾಗಕಾರ
(C) ಉಪಾರಿಕ
(D) ಪಂಚಮಂಡಲ

45. ಕೆಳಗಿನ ಹೇಳಿಕೆಗಳನ್ನು ಓದಿ.
ಭಾರತದ ಪೂರ್ವ ಕರಾವಳಿಗೆ ಹೋಲಿಸಿದರೆ ಕರಾವಳಿ ಕರ್ನಾಟಕವು ಏಕೆ ದೊಡ್ಡ ನದೀಮುಖಜ ಭೂಮಿ ಹೊಂದಿಲ್ಲ ? ಸರಿಯಾದುದನ್ನು ಆಯ್ಕೆ ಮಾಡಿ.
1. ಹೆಚ್ಚಿನ ಎತ್ತರದ ಅಲೆಗಳನ್ನು ಉತ್ಪಾದಿಸುವ ಅತ್ಯಂತ ಸಕ್ರಿಯವಾದ ನೈಋತ್ಯ ಮಾನ್ಸೂನ್‌ಗಳ ಕಾರಣದಿಂದಾಗಿ.
2. ಹೆಚ್ಚಿನ ಎತ್ತರದ ಅಲೆಗಳು ಕರಾವಳಿಯನ್ನು ತೊಳೆಯುತ್ತವೆ ಮತ್ತು ನದಿಯ ಹೊರೆಗಳನ್ನು ಆಳ ಸಮುದ್ರಕ್ಕೆ ಒಯ್ಯುತ್ತವೆ.
3. ಪಶ್ಚಿಮಕ್ಕೆ ಹರಿಯುವ ನದಿಗಳು ಎಂದಿಗೂ ಸವೆತದ ಹೊರೆಯನ್ನು ತರುವುದಿಲ್ಲ.
4. ಬಹುಮಟ್ಟಿಗೆ ಮುಳುಗಿರುವ ಕರ್ನಾಟಕ ಕರಾವಳಿ.
(A) ಎಲ್ಲಾ ಹೇಳಿಕೆಗಳಿಂದಾಗಿ.
(B) 1ನೇ, 2ನೇ ಮತ್ತು 4ನೇ ಹೇಳಿಕೆಗಳಿಂದಾಗಿ.
(C) 2ನೇ, 3ನೇ ಮತ್ತು 4ನೇ ಹೇಳಿಕೆಗಳಿಂದಾಗಿ.
(D) 1ನೇ, 2ನೇ ಮತ್ತು 3ನೇ ಹೇಳಿಕೆಗಳಿಂದಾಗಿ.

Foresightkas.com

46. ಚತುರ್ವರ್ಣ ವ್ಯವಸ್ಥೆಯನ್ನು ಋಗ್ವೇದದ ಹಿಂದಿನ ಸ್ತೋತ್ರಗಳಲ್ಲಿ, ______ ದ 10ನೇ ಮಂಡಲದಲ್ಲಿ ಉಲ್ಲೇಖಿಸಲಾಗಿದೆ.
(A) ಜಬಲ ಉಪನಿಷತ್
(B) ಶತಪಥ ಬ್ರಾಹ್ಮಣ
(C) ತೈತರಿಯ ಸಂಹಿತಾ
(D) ಪುರುಷ ಸೂಕ್ತ

47. ನಂತರದ ವೈದಿಕ ಅವಧಿಯಲ್ಲಿ, ಚಕ್ರವರ್ತಿ ಎಂದು ತಮ್ಮನ್ನು ತಾವು ಸ್ಥಾಪಿಸಿಕೊಳ್ಳಲು ರಾಜರು ______ ನಿರ್ವಹಿಸಿದರು.
(A) ಅಶ್ವಮೇಧ
(B) ಜಾತಕರ್ಮ
(C) ಸಮವರ್ತನ
(D) ವರುಣ ಯಜ್ಞ

Space For Rough Work



ಭಗತ್ ಸಿಂಗ್ ಮುದ್ದಾಪೂರ್. Nov 19, 2023, 12:38
Scanned with OKEN Scanner

48. Match the following ruling dynasties with their capitals :

| | | | |
|---|---|---|---|
| a. | Chandelas | I. | Warangal |
| b. | Chauhans | II. | Malwa |
| c. | Paramaras | III. | Bundelkhand - Khajuraho |
| d. | Kakathiyas | IV. | Shakambari |

| | a | b | c | d |
|---|---|---|---|---|
| (A) | IV | I | III | II |
| (B) | III | IV | II | I |
| (C) | I | II | III | IV |
| (D) | II | III | I | IV |

49. The Chisti order was introduced in India by
(A) Nizam-ud-in Auliya
(B) Shaikh Ahmed Abdul Haqq
(C) Khwaja Muin-ud-in Chisti
(D) Farid-ud-in

50. Which of the following pass is not lying in Punjab Himalayan Longitudinal section ?
(A) Bara Lapcha (B) Zojila (C) Rohtang (D) Pirpanjal

51. Which of the Chola rulers destroyed Anuradhapura, once the capital of Ceylon ?
(A) Parantaka – I
(B) Rajendra Gangaikonda Chola
(C) Raja Raja the Great
(D) Kulottunga – I

52. The most important port of Cholas, from where they carried on a brisk trade, situated at the mouth of Kaveri river (northern branch) is
(A) Polannaruva
(B) Tanjavur
(C) Trichinapally
(D) Kaveripattanam (puhar)

53. Mihirabhoja, the devotee of Vishnu with a title of "Adivaraha" belonged to
(A) Prathiharas of Rajasthan
(B) Rastrakuta dynasty
(C) Sena dynasty of Bengal
(D) Paramara dynasty of Malwa

Space For Rough Work

Foresightkar.com



ಭಗತ್ ಸಿಂಗ್ ಮದ್ಲಾಪೂರ್.
Nov 19, 2023, 12:38
Scanned with OKEN Scanner

48. ಆಳ್ವಿಕೆಯ ರಾಜವಂಶ ಮತ್ತು ಅವುಗಳ ರಾಜಧಾನಿಯೊಂದಿಗೆ ಕೆಳಗಿನವುಗಳನ್ನು ಹೊಂದಿಸಿ.

| | | | |
|---|---|---|---|
| a. | ಚಂದೇಲರು | I. | ವಾರಂಗಲ್ |
| b. | ಚೌಹಾಣರು | II. | ಮಾಳ್ವ |
| c. | ಪರಮಾರರು | III. | ಬುಂದೇಲ್‌ಖಂಡ್ – ಖಜುರಾಹೊ |
| d. | ಕಾಕತೀಯರು | IV. | ಶಾಕಂಬರಿ |

| | a | b | c | d |
|---|---|---|---|---|
| (A) | IV | I | III | II |
| (B) | III | IV | II | I |
| (C) | I | II | III | IV |
| (D) | II | III | I | IV |

49. ಚಿಸ್ತಿ ಕ್ರಮವನ್ನು ಭಾರತದಲ್ಲಿ ______ ರಿಂದ ಪರಿಚಯಿಸಲ್ಪಟ್ಟಿತು.

(A) ನಿಜಾಮ್ ಉದ್-ಇನ್ ಔಲಿಯಾ
(B) ಶೇಖ್ ಅಹ್ಮದ್ ಅಬ್ದುಲ್ ಹಕ್
(C) ಖ್ವಾಜಾ ಮುಯಿನ್-ಉದ್-ಇನ್ ಚಿಸ್ತಿ
(D) ಫರೀದ್ ಉದ್-ಇನ್

50. ಈ ಕೆಳಗಿನ ಯಾವ ಕಣಿವೆ ಪಂಜಾಬ್ ಹಿಮಾಲಯದ ರೇಖಾಂಶ ವಿಭಾಗದಲ್ಲಿ ಇಲ್ಲ ?

(A) ಬಾರಾ ಲಾಪ್ಚಾ
(B) ಝೋಜಿಲಾ
(C) ರೋಹ್ತಾಂಗ್
(D) ಪೀರ್‌ಪಂಜಾಲ್

51. ಸಿಲೋನ್‌ನ ರಾಜಧಾನಿಯಾಗಿದ್ದ ಅನುರಾಧಪುರವನ್ನು ಚೋಳ ವಂಶದ ಯಾವ ಆಡಳಿತಗಾರರು ನಾಶ ಮಾಡಿದರು ?

(A) ಪರಾಂತಕ – I
(B) ರಾಜೇಂದ್ರ ಗಂಗೈಕೊಂಡ ಚೋಳ
(C) ರಾಜ ರಾಜಾ ದಿ ಗ್ರೇಟ್
(D) ಕುಲೋತ್ತುಂಗ – I

52. ಚೋಳರ ಪ್ರಮುಖ ಬಂದರು, ಅಲ್ಲಿಂದ ಅವರು ಚುರುಕಾದ ವ್ಯಾಪಾರವನ್ನು ನಡೆಸಿದರು. ಇದು ಕಾವೇರಿ ನದಿಯ ಮುಖಭಾಗದಲ್ಲಿದೆ. ಇದು ______.

(A) ಪೋಲನ್ನರುವ
(B) ತಂಜಾವೂರು
(C) ತಿರುಚಿನಪಳ್ಳಿ
(D) ಕಾವೇರಿಪಟ್ಟಣಮ್ (ಪುಹಾರ್)

53. "ಆದಿವರಾಹ" ಎಂಬ ಶೀರ್ಷಿಕೆಯುಳ್ಳ, ವಿಷ್ಣು ಭಕ್ತನಾದ ಮಿಹಿರಭೋಜ, ______ ವಂಶಕ್ಕೆ ಸೇರಿದವರು.

(A) ರಾಜಸ್ಥಾನದ ಪ್ರತಿಹಾರ ರಾಜವಂಶ
(B) ರಾಷ್ಟ್ರಕೂಟ ರಾಜವಂಶ
(C) ಬಂಗಾಳದ ಸೇನ ರಾಜವಂಶ
(D) ಮಾಳ್ವಾದ ಪರಮಾರ ರಾಜವಂಶ

**Space For Rough Work**

Foresightkas.com



ಭಗತ್ ಸಿಂಗ್ ಮದ್ಲಾಪೂರ್.
Nov 19, 2023, 12:38
Scanned with OKEN Scanner

54. Select the correct sequence of the Islands of the Nicobar group of Islands from North to South direction.
(A) Car Nicobar, Little Nicobar, Great Nicobar, Teressa Island
(B) Great Nicobar, Little Nicobar, Teressa Island, Car Nicobar
(C) Little Nicobar, Teressa Island, Great Nicobar, Car Nicobar
(D) Car Nicobar, Teressa Island, Little Nicobar, Great Nicobar

55. Which among the following separates the Andaman and Nicobar groups of Islands ?
(A) Little Nicobar
(B) Barren Island
(C) Ten Degree Channel
(D) Andaman Sea

56. In the group of Andaman and Nicobar Islands the Duncan passage lies between
(A) Middle Andaman and South Andaman
(B) South Andaman and Little Andaman
(C) South Andaman and Middle Andaman
(D) North Andaman and Middle Andaman

57. Which of the following Islands of India is not a volcanic origin ?
(A) Teressa Island
(B) Kavaratti Island
(C) Car Nicobar Island
(D) Barren Island

58. The largest Island in the group of Lakshadweep Islands is
(A) Minicoy Island (B) Agatti Island (C) Kavaratti Island (D) Suheli Island

59. In which of the following state/UT the Shipki La and Bara Lapcha La passes are located
(A) Uttarakhand (B) Jammu (C) Sikkim (D) Himachal Pradesh

60. The older Alluvium in river beds of Northern plains of India in the form of terraces found above the flood plain level are known as
(A) Khadar (B) Bhabar (C) Terai (D) Bhangar

61. The porous, gravel ridden plains at the foot of the Himalayas in the Northern plains of India where the Himalayan streams descend on to the plains are called as
(A) Bhabar (B) Terai (C) Bhangar (D) Khadar

**Space For Rough Work**

Foresightkas.com



ಭಗತ್ ಸಿಂಗ್ ಮದ್ಲಾಪೂರ್.
Nov 19, 2023, 12:38
Scanned with OKEN Scanner

54. ನಿಕೋಬಾರ್ ದ್ವೀಪ ಸಮೂಹದ ದ್ವೀಪಗಳನ್ನು, ಉತ್ತರದಿಂದ ದಕ್ಷಿಣಕ್ಕೆ ಸರಿಯಾದ ಅನುಕ್ರಮವನ್ನು ಆರಿಸಿ ಬರೆಯಿರಿ.

(A) ಕಾರ್ ನಿಕೋಬಾರ್, ಲಿಟ್ಲ್ ನಿಕೋಬಾರ್, ಗ್ರೇಟ್ ನಿಕೋಬಾರ್, ತೆರೆಸ್ಸಾ ದ್ವೀಪ

(B) ಗ್ರೇಟ್ ನಿಕೋಬಾರ್, ಲಿಟ್ಲ್ ನಿಕೋಬಾರ್, ತೆರೆಸ್ಸಾ ದ್ವೀಪ, ಕಾರ್ ನಿಕೋಬಾರ್

(C) ಲಿಟ್ಲ್ ನಿಕೋಬಾರ್, ತೆರೆಸ್ಸಾ ದ್ವೀಪ, ಗ್ರೇಟ್ ನಿಕೋಬಾರ್, ಕಾರ್ ನಿಕೋಬಾರ್

(D) ಕಾರ್ ನಿಕೋಬಾರ್, ತೆರೆಸ್ಸಾ ದ್ವೀಪ, ಲಿಟ್ಲ್ ನಿಕೋಬಾರ್, ಗ್ರೇಟ್ ನಿಕೋಬಾರ್

55. ಕೆಳಗಿನ ಯಾವುದು ಅಂಡಮಾನ್ ಮತ್ತು ನಿಕೋಬಾರ್ ದ್ವೀಪ ಸಮೂಹಗಳನ್ನು ಪ್ರತ್ಯೇಕಿಸುತ್ತದೆ ?

(A) ಲಿಟ್ಲ್ ನಿಕೋಬಾರ್ (B) ಬಾರೆನ್ ದ್ವೀಪ (C) ಟೆನ್ ಡಿಗ್ರಿ ಚಾನಲ್ (D) ಅಂಡಮಾನ್ ಸಮುದ್ರ

56. ಅಂಡಮಾನ್ ಮತ್ತು ನಿಕೋಬಾರ್ ದ್ವೀಪ ಸಮೂಹದಲ್ಲಿ ಡಂಕನ್ ಪ್ಯಾಸೇಜ್ _____ ನಡುವೆ ಇರುತ್ತದೆ.

(A) ಮಧ್ಯ ಅಂಡಮಾನ್ ಮತ್ತು ದಕ್ಷಿಣ ಅಂಡಮಾನ್

(B) ದಕ್ಷಿಣ ಅಂಡಮಾನ್ ಮತ್ತು ಲಿಟ್ಲ್ ಅಂಡಮಾನ್

(C) ದಕ್ಷಿಣ ಅಂಡಮಾನ್ ಮತ್ತು ಮಧ್ಯ ಅಂಡಮಾನ್

(D) ಉತ್ತರ ಅಂಡಮಾನ್ ಮತ್ತು ಮಧ್ಯ ಅಂಡಮಾನ್

57. ಕೆಳಗಿನ ಯಾವ ಭಾರತದ ದ್ವೀಪಗಳು ಜ್ವಾಲಾಮುಖಿ ಮೂಲವಲ್ಲ ?

(A) ತೆರೆಸ್ಸಾ ದ್ವೀಪ

(B) ಕವರಟ್ಟಿ ದ್ವೀಪ

(C) ಕಾರ್ ನಿಕೋಬಾರ್ ದ್ವೀಪ

(D) ಬಾರೆನ್ ದ್ವೀಪ

58. ಲಕ್ಷದ್ವೀಪ ಸಮೂಹದಲ್ಲಿ, ಅತಿದೊಡ್ಡ ದ್ವೀಪ ಯಾವುದು ?

(A) ಮಿನಿಕೊಯ್ ದ್ವೀಪ (B) ಅಗಾಟ್ಟಿ ದ್ವೀಪ (C) ಕವರಟ್ಟಿ ದ್ವೀಪ (D) ಸುಹೇಲಿ ದ್ವೀಪ

59. ಕೆಳಗಿನ ಯಾವ ರಾಜ್ಯ/ಕೇಂದ್ರಾಡಳಿತದಲ್ಲಿ, ಶಿಪ್ಕಿ ಲಾ ಮತ್ತು ಚೂರಾ ಲಾಪ್ಚಾ ಲಾ ಕಣಿವೆಗಳು ಇವೆ ?

(A) ಉತ್ತರಾಖಂಡ (B) ಜಮ್ಮು (C) ಸಿಕ್ಕಿಂ (D) ಹಿಮಾಚಲ ಪ್ರದೇಶ

60. ಭಾರತದ ಉತ್ತರ ಬಯಲು ಪ್ರದೇಶದ ನದಿಯ ತಳದಲ್ಲಿರುವ ಹಳೆಯ ಮೆಕ್ಕಲು, ಪ್ರವಾಹ ಬಯಲು ಮಟ್ಟಕ್ಕಿಂತ ಮೇಲಿರುವ ತಾರಸಿಗಳ ರೂಪದಲ್ಲಿ ಇರುವುದನ್ನು _____ ಎಂದು ಕರೆಯಲಾಗುತ್ತದೆ.

(A) ಖಾದರ್ (B) ಭಾಬರ್ (C) ತೆರೈ (D) ಬಂಗರ್

61. ಹಿಮಾಲಯದ ಭೂಪ್ರದೇಶವು ಬಯಲು ಪ್ರದೇಶಕ್ಕೆ ಇಳಿಯುವ ಭಾರತದ ಉತ್ತರ ಬಯಲಿನಲ್ಲಿ, ಹಿಮಾಲಯದ ತಪ್ಪಲಿನಲ್ಲಿರುವ ರಂಧ್ರಗಳಿರುವ ಜಲ್ಲಿಕಲ್ಲುಗಳಿಂದ ಕೂಡಿದ ಬಯಲು ಪ್ರದೇಶವನ್ನು _____ ಎಂದು ಕರೆಯಲಾಗುತ್ತದೆ.

(A) ಭಾಬರ್ (B) ತೆರೈ (C) ಬಂಗರ್ (D) ಖಾದರ್

**Space For Rough Work**

Foresightkas.com

ಭಗತ್ ಸಿಂಗ್ ಮದ್ಲಾಪೂರ್.
Nov 19, 2023, 12:38



Scanned with OKEN Scanner

62. A term which does not refer to social movements but to a widespread attitude in a society of rejection of alien persons ?
(A) Routinization (B) Adaptation (C) Nativism (D) Revitalization

63. The Apatani tribal community lives in
(A) Karnataka (B) Kerala
(C) Maharashtra (D) Arunachal Pradesh

64. A tribal community in India which is still having hunting-gathering based economy ?
(A) Todas (B) Jarawas (C) Khasi (D) Oraons

65. Who is the pioneer for the structural functional school of thought ?
(A) A.L. Kroeber (B) Radcliffe Brown (C) Hoebel (D) B. Malinowski

66. Tribal dominated areas in the North-east India comes under the ______ schedule of the constitution of India.
(A) $8^{th}$ (B) $5^{th}$ (C) $6^{th}$ (D) $7^{th}$

67. Identify the correct sequence.
(A) Incisor – Premolar – Canine – Molar (B) Canine – Incisor – Premolar – Molar
(C) Premolar – Molar– Canine – Incisor (D) Incisor – Canine – Premolar – Molar

68. Identify the river which is one of the Northern tributaries of the river Ganges.
(A) Kosi (B) Chambal (C) Damodar (D) Sone

69. Glaciers are
(A) Frozen oceans.
(B) Pieces of stones.
(C) The huge mound of stones.
(D) The huge mound of ice journeying here and there.

70. Applying vermilion on the forehead by married Hindu women is an example of
(A) Cultural pattern (B) Cultural trait (C) Culture area (D) Cultural complex

Foresightkas.com

Space For Rough Work

ಭಗತ್ ಸಿಂಗ್ ಮದ್ಲಾಪೂರ್.
Nov 19, 2023, 12:39



Scanned with OKEN Scanner

62. ಒಂದು ಪದವು ಸಾಮಾಜಿಕ ಚಳುವಳಿಗಳನ್ನು ಉಲ್ಲೇಖಿಸುವುದಿಲ್ಲ ಆದರೆ ಅನ್ಯದೇಶದ ವ್ಯಕ್ತಿಗಳನ್ನು ತಿರಸ್ಕರಿಸುವ ಸಮಾಜದಲ್ಲಿ ವ್ಯಾಪಕವಾದ ಮನೋಭಾವವನ್ನು ಸೂಚಿಸುತ್ತದೆ. ಇದು _____.

(A) ಮಾರ್ಗೀಕರಣ (B) ರೂಪಾಂತರ (C) ಸಹಜಜ್ಞಾನ ಸಿದ್ಧಾಂತ (D) ಪುನಶ್ಚೇತನ

63. ಅಪತಾನಿ ಬುಡಕಟ್ಟು ಸಮುದಾಯ _____ ನಲ್ಲಿ ವಾಸಿಸುತ್ತದೆ.

(A) ಕರ್ನಾಟಕ (B) ಕೇರಳ (C) ಮಹಾರಾಷ್ಟ್ರ (D) ಅರುಣಾಚಲ ಪ್ರದೇಶ

64. ಇನ್ನೂ ಬೇಟೆಯಾಡುವ ಕೂಟ ಆಧಾರಿತ ಆರ್ಥಿಕತೆಯನ್ನು ಹೊಂದಿರುವ ಭಾರತದ ಬುಡಕಟ್ಟು ಸಮುದಾಯ ಯಾವುದು ?

(A) ತೋಡರು (B) ಜರಾವಾಗಳು (C) ಖಾಸಿ (D) ಓರಾನ್‌ಗಳು

65. ಯಾರು ಚಿಂತನೆಯ ರಚನಾತ್ಮಕ ಕ್ರಿಯಾತ್ಮಕ ಶಾಲೆಯ ಪ್ರವರ್ತಕರಾಗಿದ್ದಾರೆ ?

(A) ಎ.ಎಲ್. ಕ್ರೋಬರ್ (B) ರೇಡ್‌ಕ್ಲಿಫ್ ಬ್ರೌನ್ (C) ಹೋಯ್ಬೆಲ್ (D) ಬಿ. ಮಲಿನೋವ್‌ಸ್ಕಿ

66. ಈಶಾನ್ಯ ಭಾರತದಲ್ಲಿ ಬುಡಕಟ್ಟು ಪ್ರಾಬಲ್ಯದ ಪ್ರದೇಶಗಳು ಭಾರತದ ಸಂವಿಧಾನದ _____ ವೇಳಾಪಟ್ಟಿಯ ಅಡಿಯಲ್ಲಿ ಬರುತ್ತದೆ.

(A) 8ನೇ (B) 5ನೇ (C) 6ನೇ (D) 7ನೇ

67. ಸರಿಯಾದ ಕ್ರಮವನ್ನು ಗುರುತಿಸಿ.

(A) ಛೇದಕ – ಪೂರ್ವ ದವಡೆ – ಕೋರೆಹಲ್ಲು – ದವಡೆಹಲ್ಲು

(B) ಕೋರೆಹಲ್ಲು – ಛೇದಕ – ಪೂರ್ವ ದವಡೆ – ದವಡೆಹಲ್ಲು

(C) ಪೂರ್ವ ದವಡೆ – ದವಡೆಹಲ್ಲು – ಕೋರೆಹಲ್ಲು – ಛೇದಕ

(D) ಛೇದಕ – ಕೋರೆಹಲ್ಲು – ಪೂರ್ವ ದವಡೆ – ದವಡೆಹಲ್ಲು

68. ಗಂಗಾ ನದಿಯ ಉತ್ತರದ ಉಪನದಿಗಳಲ್ಲಿ ಒಂದಾದುದನ್ನು ಇಲ್ಲಿ ಗುರುತಿಸಿ.

(A) ಕೋಸಿ (B) ಚಂಬಲ್ (C) ದಾಮೋದರ್ (D) ಸೋನ್

69. ಹಿಮನದಿಗಳು

(A) ಹೆಪ್ಪುಗಟ್ಟಿದ ಸಾಗರಗಳು (B) ಕಲ್ಲುಗಳ ತುಂಡುಗಳು

(C) ಕಲ್ಲುಗಳ ದೊಡ್ಡ ಗುಡ್ಡ (D) ಅಲ್ಲಿ ಇಲ್ಲಿ ಪ್ರಯಾಣಿಸುತ್ತಿರುವ ಹಿಮದ ದೊಡ್ಡ ದಿಬ್ಬ

70. ವಿವಾಹಿತ ಹಿಂದೂ ಮಹಿಳೆಯರು ಹಣೆಯ ಮೇಲೆ ಸಿಂಧೂರವನ್ನು ಹಚ್ಚಿಕೊಳ್ಳುವುದು _____ ಗೆ ಉದಾಹರಣೆಯಾಗಿದೆ.

(A) ಸಾಂಸ್ಕೃತಿಕ ಮಾದರಿ (B) ಸಾಂಸ್ಕೃತಿಕ ಲಕ್ಷಣ (C) ಸಂಸ್ಕೃತಿ ಪ್ರದೇಶ (D) ಸಾಂಸ್ಕೃತಿಕ ಸಂಕೀರ್ಣ

**Space For Rough Work**

Foresguitkas.com

ಭಗತ್ ಸಿಂಗ್ ಮದ್ಲಾಪೂರ್.
Nov 19, 2023, 12:39



Scanned with OKEN Scanner

71. Choose the correct pair of words.

(A) Deshabandhu : Dr. Rajendra Prasad
(B) Deenabandhu : C.F. Andrews
(C) Guruji : Rabindranath Tagore
(D) Payyoli Express : Milkha Singh

72. In the following question, four groups of letters are given, out of which three are alike in a certain way while one is different. Choose the odd one.

(A) T V X Y
(B) E G H I
(C) J L M N
(D) O Q R S

73. Anil and Akash are brothers. Ananya and Akshatha are sisters. Anil's son is Akshatha's brother. How is Akash related to Ananya ?

(A) Grandfather
(B) Father
(C) Uncle
(D) Brother

74. Choose the Venn diagram which best illustrates the relationship between the following three classes :

Stars, Sun, Jupiter

(A) 
(B) 
(C) 
(D) 

Foresightkas.com

75. Which of the following statements about the culture are correct ?

(A) Each culture is holistic.
(B) Physical and biological features of the people are determined by culture.
(C) Culture is shared in common by the members of a given group.
(D) Culture trait is the smallest unit of culture.

76. Which one among the following is an example of ascribed status ?

(A) Professor
(B) Village Head
(C) Minister
(D) Lawyer

77. Three of the following four words are alike in a certain way and one is different. Find the odd one out.

(A) San Francisco
(B) Brasilia
(C) Santiago
(D) San Jose

Space For Rough Work

ಭಗತ್ ಸಿಂಗ್ ಮದ್ಲಾಪುರ್.
Nov 19, 2023, 12:39



Scanned with OKEN Scanner

71. ಸರಿಯಾದ ಜೋಡಿಯನ್ನು ಗುರುತಿಸಿರಿ.

(A) ದೇಶಬಂಧು – ಡಾ. ರಾಜೇಂದ್ರ ಪ್ರಸಾದ್
(B) ದೀನಬಂಧು – ಸಿ.ಎಫ್. ಆ್ಯಂಡ್ರೂಸ್
(C) ಗುರೂಜೀ – ರಬೀಂದ್ರನಾಥ ಟ್ಯಾಗೋರ್
(D) ಪಯ್ಯೋಲಿ ಎಕ್ಸ್ ಪ್ರೆಸ್ – ಮಿಲ್ಖಾ ಸಿಂಗ್

72. ಈ ಕೆಳಗಿನ ಪ್ರಶ್ನೆಯಲ್ಲಿ ಅಕ್ಷರಗಳ ನಾಲ್ಕು ಗುಂಪುಗಳನ್ನು ನೀಡಲಾಗಿದೆ. ಅವುಗಳಲ್ಲಿ ಮೂರು ಯಾವುದೋ ಒಂದು ರೀತಿಯಲ್ಲಿ ಸಾಮ್ಯತೆಯನ್ನು ಹೊಂದಿದ್ದು, ಒಂದು ವಿಭಿನ್ನವಾಗಿದೆ. ವಿಭಿನ್ನವಾಗಿರುವುದನ್ನು ಗುರುತಿಸಿರಿ.

(A) T V X Y
(B) E G H I
(C) J L M N
(D) O Q R S

73. ಅನಿಲ್ ಮತ್ತು ಆಕಾಶ್ ಸಹೋದರರಾಗಿದ್ದಾರೆ. ಅನನ್ಯಾ ಮತ್ತು ಅಕ್ಷತಾ ಸಹೋದರಿಯರಾಗಿದ್ದಾರೆ. ಅನಿಲನ ಮಗ ಅಕ್ಷತಾಳ ಸಹೋದರನಾಗಿದ್ದಾನೆ. ಹಾಗಾದರೆ ಆಕಾಶ್ ಮತ್ತು ಅನನ್ಯಾಳ ಮಧ್ಯದ ಸಂಬಂಧವೇನು ?

(A) ತಾತ (ಅಜ್ಜ)
(B) ತಂದೆ
(C) ಅಂಕಲ್
(D) ಸಹೋದರ

74. ಈ ಕೆಳಗಿನ ಮೂರು ವರ್ಗಗಳ ಮಧ್ಯದ ಸಂಬಂಧವನ್ನು ಸೂಕ್ತವಾಗಿ ಅಭಿವ್ಯಕ್ತಪಡಿಸುವ ವೆನ್ ಚಿತ್ರವನ್ನು ಗುರುತಿಸಿರಿ.

ನಕ್ಷತ್ರಗಳು, ಸೂರ್ಯ, ಗುರು

(A) 
(B) 
(C) 
(D) 

75. ಕೆಳಗಿನ ಯಾವ ಹೇಳಿಕೆ ಸಂಸ್ಕೃತಿ ಬಗ್ಗೆ, ಸರಿಯಾಗಿದೆ ?

(A) ಪ್ರತಿಯೊಂದು ಸಂಸ್ಕೃತಿಯು ಸಮಗ್ರವಾಗಿದೆ.
(B) ಜನರ ಭೌತಿಕ ಮತ್ತು ಜೈವಿಕ ಲಕ್ಷಣಗಳನ್ನು ಸಂಸ್ಕೃತಿಯಿಂದ ನಿರ್ಧರಿಸಲಾಗುತ್ತದೆ.
(C) ನಿರ್ದಿಷ್ಟ ಗುಂಪಿನ ಸದಸ್ಯರಿಂದ ಸಂಸ್ಕೃತಿಯನ್ನು ಸಾಮಾನ್ಯವಾಗಿ ಹಂಚಿಕೊಳ್ಳಲಾಗುತ್ತದೆ.
(D) ಸಂಸ್ಕೃತಿಯ ಲಕ್ಷಣವು ಸಂಸ್ಕೃತಿಯ ಚಿಕ್ಕ ಘಟಕವಾಗಿದೆ.

Foresightkas.com

76. ಕೆಳಗಿನವುಗಳಲ್ಲಿ ಯಾವುದು ಆಪಾದಿತ ಸ್ಥಿತಿಯ ಉದಾಹರಣೆಯಾಗಿದೆ ?

(A) ಪ್ರಾಧ್ಯಾಪಕ
(B) ಗ್ರಾಮದ ಮುಖ್ಯಸ್ಥ
(C) ಮಂತ್ರಿ
(D) ವಕೀಲ

77. ಈ ಕೆಳಗಿನ ನಾಲ್ಕು ಪದಗಳಲ್ಲಿ ಮೂರು ಪದಗಳು ಯಾವುದೋ ಒಂದು ರೀತಿಯಲ್ಲಿ ಸಾಮ್ಯತೆಯನ್ನು ಹೊಂದಿವೆ ಮತ್ತು ಒಂದು ಪದ ವಿಭಿನ್ನವಾಗಿದೆ. ಗುಂಪಿಗೆ ಸೇರದ್ದನ್ನು ಗುರುತಿಸಿರಿ.

(A) ಸ್ಯಾನ್ ಫ್ರಾನ್ಸಿಸ್ಕೋ
(B) ಬ್ರೆಸಿಲಿಯಾ
(C) ಸ್ಯಾಂಟಿಯಾಗೋ
(D) ಸ್ಯಾನ್ ಜೋಸ್

**Space For Rough Work**

A B C D E F G H I J K L M N O P Q R S T U V W X Y Z



Nov 19, 2023, 12:39
Scanned with OKEN Scanner

78. Which of the following statement is wrong with respect to positon of hands of clock ?

(A) None of these

(B) In every 12 hours the two hands are at right angles 24 times.

(C) In every 12 hours both hands are in opposite direction 11 times.

(D) In every 12 hours, the two hands are in the same straight line 22 times.

79. If 2[nd] October, 2007 was a Tuesday, what was the day on 12[th] January, 2012 ?

(A) Friday (B) Tuesday (C) Monday (D) Thursday

80. If P = '+', Q = '–', R = '×' and S = '÷', then
10R10S10P10Q10 = ?

(A) 100 (B) 0 (C) 10 (D) 5

81. Find out which one of the figures does not belong to that group ?

(A) 

(B) 

(C) 

(D) 

82. In the following question, a set of figures carrying certain characters is given. Assuming that the characters in the following set follow similar pattern, find the missing character.




(A) 31 (B) 29 (C) 35 (D) 32

83. Zoroaster is related to Parsi religion in the same way as Abraham is related to ______ religion.

(A) None of these

(B) Islam

(C) Judaism

(D) Christianity

84. Which year will have the same calendar as that of 2024 ?

(A) 2052 (B) 2036 (C) 2040 (D) 2044

Space For Rough Work



Nov 19, 2023, 12:39

Foresightkas.com

Scanned with OKEN Scanner

78. ಗಡಿಯಾರದ ಮುಳ್ಳುಗಳ ಸ್ಥಿತಿಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆ ತಪ್ಪಾಗಿದೆ ?
(A) ಇವ್ಯಾವುದೂ ಅಲ್ಲ
(B) ಪ್ರತಿ 12 ಗಂಟೆಗಳಲ್ಲಿ ಎರಡೂ ಮುಳ್ಳುಗಳು 24 ಬಾರಿ ಲಂಬ ಕೋನದಲ್ಲಿರುತ್ತವೆ.
(C) ಪ್ರತಿ 12 ಗಂಟೆಗಳಲ್ಲಿ ಎರಡೂ ಮುಳ್ಳುಗಳು 11 ಬಾರಿ ವಿರುದ್ಧ ದಿಕ್ಕಿನಲ್ಲಿರುತ್ತವೆ.
(D) ಪ್ರತಿ 12 ಗಂಟೆಗಳಲ್ಲಿ ಎರಡೂ ಮುಳ್ಳುಗಳು 22 ಬಾರಿ ಸರಳ ರೇಖೆಯಲ್ಲಿರುತ್ತವೆ.

79. 2, ಅಕ್ಟೋಬರ್ 2007 ಮಂಗಳವಾರವಾಗಿದ್ದರೆ, 12, ಜನವರಿ 2012 ಯಾವ ದಿನವಾಗಿರುತ್ತದೆ ?
(A) ಶುಕ್ರವಾರ (B) ಮಂಗಳವಾರ (C) ಸೋಮವಾರ (D) ಗುರುವಾರ

80. ಒಂದು ವೇಳೆ P = '+', Q = '–', R = '×' ಮತ್ತು S = '÷' ಆದರೆ ,
10R10S10P10Q10 = ?
(A) 100 (B) 0 (C) 10 (D) 5

81. ಈ ಕೆಳಗಿನ ಯಾವ ಚಿತ್ರವು ಗುಂಪಿಗೆ ಸೇರುವುದಿಲ್ಲ ?

(A) 
(B) 
(C) 
(D) 

82. ಈ ಕೆಳಗಿನ ಪ್ರಶ್ನೆಯಲ್ಲಿ ಒಂದೇ ರೀತಿಯ ಕೆಲವು ಲಕ್ಷಣಗಳನ್ನು ಹೊಂದಿರುವ ಚಿತ್ರಗಳನ್ನು ನೀಡಲಾಗಿದೆ. ಈ ಕೆಳಗಿನ ಚಿತ್ರಗಳು ಒಂದೇ ಲಕ್ಷಣಗಳನ್ನು ಹೊಂದಿವೆ ಎಂದು ಭಾವಿಸಿ, ಕಾಣೆಯಾಗಿರುವ ಸಂಖ್ಯೆಯನ್ನು ಗುರುತಿಸಿರಿ.




(A) 31 (B) 29 (C) 35 (D) 32

83. ಜೋರಾಸ್ಟರ್‌ರವರು ಪಾರ್ಸಿ ಧರ್ಮಕ್ಕೆ ಸಂಬಂಧಿಸಿದಂತೆ, ಅಬ್ರಾಹಂರವರು ______ ಧರ್ಮಕ್ಕೆ ಸಂಬಂಧಿಸಿದವರಾಗಿದ್ದಾರೆ.
(A) ಇವ್ಯಾವುದೂ ಅಲ್ಲ (B) ಇಸ್ಲಾಂ (C) ಜುಡಾಯಿಸಂ (D) ಕ್ರಿಶ್ಚಿಯಾನಿಟಿ

84. ಈ ಕೆಳಗಿನ ಯಾವ ವರ್ಷದ ಕ್ಯಾಲೆಂಡರ್ 2024 ರ ಕ್ಯಾಲೆಂಡರ್‌ನಂತೆಯೇ ಇರುತ್ತದೆ ?
(A) 2052 (B) 2036 (C) 2040 (D) 2044

**Space For Rough Work**



Foresightias.com
Scanned with OKEN Scanner

85. Find the maximum number of trees which can be planted 10 m apart on the two sides of a straight road 880 m long.

(A) 176 (B) 88 (C) 178 (D) 89

86. John buys a printer for ₹ 5,000 and sells it for ₹ 3,000. Find his loss percent.

(A) 30% (B) 45% (C) 40% (D) 20%

87. Find the mean proportional between 441 and 1024.

(A) 672 (B) 953 (C) 534 (D) 732

88. If speed of $5\frac{1}{2}$ m/s is converted to km/h, then it would be

(A) 15 km/hr (B) 19.8 km/hr (C) 5.5 km/hr (D) 18.5 km/hr

89. If $\frac{x}{2}+\frac{y}{3}=4$ and $\frac{2}{x}+\frac{3}{y}=1$, then what is $x+y$ equal to ?

(A) 11 (B) 8 (C) 9 (D) 10

90. In the following question find out the answer figure which completes the question figure matrix.

**Question Figure**




**Answer Figure**

(A) 

(B) 

(C) 

(D) 

91. If $0.81 \div a^2 = 81$, then positive value of 'a' will be

(A) 10 (B) 0.1 (C) 0.01 (D) 1.0

92. If $\frac{4}{5}$ of a number exceeds its $\frac{3}{4}^{th}$ by 16 then the number is

(A) 180 (B) 300 (C) 160 (D) 320

Space For Rough Work

Foresightkas.com

Nov 19, 2023, 12:40

Scanned with OKEN Scanner

ಭಗತ್ ಸಿಂಗ್ ಮಲ್ಲಾಪುರ್.
Nov 19, 2023, 12:40

85. 880 ಮೀಟರ್ ಉದ್ದದ ನೇರ ರಸ್ತೆಯ ಎರಡೂ ಬದಿಗಳಲ್ಲಿ 10 ಮೀಟರ್‌ಗಳ ಅಂತರದಲ್ಲಿ ನೆಡಬಹುದಾದ ಗರಿಷ್ಠ ಸಂಖ್ಯೆಯ ಮರಗಳೆಷ್ಟು ?

(A) 176 (B) 88 (C) 178 (D) 89

86. ಜಾನ್ ಪ್ರಿಂಟರ್ ಅನ್ನು ರೂ. 5000 ಕ್ಕೆ ಕೊಂಡುಕೊಳ್ಳುತ್ತಾನೆ ಮತ್ತು ಅದನ್ನು ರೂ. 3000 ಕ್ಕೆ ಮಾರುತ್ತಾನೆ. ನಷ್ಟದ ಶೇಕಡಾ ಪ್ರಮಾಣವನ್ನು ಗುರುತಿಸಿರಿ.

(A) 30% (B) 45% (C) 40% (D) 20%

87. 441 ಮತ್ತು 1024 ರ ನಡುವಿನ ಸರಾಸರಿ ಅನುಪಾತವನ್ನು ಕಂಡು ಹಿಡಿಯಿರಿ.

(A) 672 (B) 953 (C) 534 (D) 732

88. ಒಂದು ವೇಳೆ $5\frac{1}{2}$ ಮೀ./ಸೆ. ವೇಗವನ್ನು ಕಿ.ಮೀ./ಗಂ. ಗೆ ಪರಿವರ್ತಿಸಿದಾಗ ವೇಗ ಎಷ್ಟಾಗಿರುತ್ತದೆ ?

(A) 15 ಕಿ.ಮೀ./ಗಂ. (B) 19.8 ಕಿ.ಮೀ./ಗಂ. (C) 5.5 ಕಿ.ಮೀ./ಗಂ. (D) 18.5 ಕಿ.ಮೀ./ಗಂ.

89. ಒಂದು ವೇಳೆ $\frac{x}{2}+\frac{y}{3}=4$ ಮತ್ತು $\frac{2}{x}+\frac{3}{y}=1$, ಆಗಿದ್ದರೆ $x+y$ ಯಾವುದಕ್ಕೆ ಸಮನಾಗಿರುತ್ತದೆ ?

(A) 11 (B) 8 (C) 9 (D) 10

90. ಈ ಕೆಳಗಿನ ಪ್ರಶ್ನೆ ಚಿತ್ರದಲ್ಲಿ ಪ್ರಶ್ನಾರ್ಥಕ ಚಿಹ್ನೆಯ ಸ್ಥಾನದಲ್ಲಿ ಬರುವ ಉತ್ತರ ಚಿತ್ರವನ್ನು ಗುರುತಿಸಿರಿ.

**Question Figure**




**Answer Figure**

(A) 
(B) 
(C) 
(D) 

Foresightkas.com

91. ಒಂದು ವೇಳೆ $0.81 \div a^2 = 81$, ಹಾಗಾದರೆ 'a' ಯ ಧನಾತ್ಮಕ ಮೌಲ್ಯ ಎಷ್ಟು ?

(A) 10 (B) 0.1 (C) 0.01 (D) 1.0

92. ಒಂದು ಸಂಖ್ಯೆಯ $\frac{4}{5}$, 16 ರಿಂದ ಅದರ $\frac{3}{4}$ ಕ್ಕೆ ಹೆಚ್ಚಾದರೆ, ಬರುವ ಸಂಖ್ಯೆಯು

(A) 180 (B) 300 (C) 160 (D) 320

Space For Rough Work



Scanned with OKEN Scanner

Nov 19, 2023, 12:40

93. The Government of India officially handed over Air India to Tata Group in January 2022. What was the total value of the deal ?

(A) ₹ 20,000 crore (B) ₹ 10,000 crore (C) ₹ 12,000 crore (D) ₹ 18,000 crore

94. Vasanthalakshmi Narasimhachari is the winner of Nritya Kalanidhi Award 2023. She excels in which of the following dance forms ?

(A) Kuchipudi and Kathakali
(B) Kuchipudi and Bharatanatyam
(C) Bharatanatyam and Mohiniattam
(D) Kathak and Manipuri

95. Who is the Chairperson of India's National Commission for Women ?

(A) Shobha Karandlaje
(B) Kushboo Sundar
(C) Smriti Irani
(D) Rekha Sharma

96. In January 2023 the Shanghai Cooperation Organization (SCO) film festival was held in Mumbai. Which of the following country is not the member of SCO ?

(A) Russia (B) Pakistan (C) Bangladesh (D) China

97. Government of India declared 15th November as "Janjatiya Gaurav Divas" dedicated to the memory of brave tribal freedom fighters. 15th November is the birthday of which of the following tribal freedom fighter ?

(A) Birsa Munda
(B) Jatra Bhagat
(C) Tirot Sing
(D) Alluri Sitarama Raju

Foresightkas.com

98. NITI Aayog in collaboration with which of the following foreign Government developed and hosted E-Amrit portal, a one stop destination for all information on electric vehicles ?

(A) Germany (B) Israel (C) Japan (D) United Kingdom

99. As per Economic Survey 2022-23, National Green Hydrogen Mission is expected to enable India to be energy independent by which year ?

(A) 2025 (B) 2030 (C) 2047 (D) 2050

100. Which state was awarded with the "Best State for Horticulture 2022" award for promoting horticulture development ?

(A) None of these
(B) Goa
(C) Maharashtra
(D) Tamil Nadu

Space For Rough Work



Scanned with OKEN Scanner

93. ಜನವರಿ 2022 ರಲ್ಲಿ ಭಾರತ ಸರ್ಕಾರವು ಅಧಿಕೃತವಾಗಿ ಏರ್ ಇಂಡಿಯಾವನ್ನು ಟಾಟಾ ಗ್ರೂಪ್‌ಗೆ ಹಸ್ತಾಂತರಿಸಿತು. ಈ ವ್ಯವಹಾರದ ಒಟ್ಟು ಮೌಲ್ಯ ಎಷ್ಟಾಗಿತ್ತು ?

(A) ರೂ. 20,000 ಕೋಟಿ (B) ರೂ. 10,000 ಕೋಟಿ (C) ರೂ. 12,000 ಕೋಟಿ (D) ರೂ. 18,000 ಕೋಟಿ

94. 2023 ನೇ ಸಾಲಿನ ನೃತ್ಯ ಕಲಾನಿಧಿ ಪ್ರಶಸ್ತಿಯ ವಿಜೇತರು ವಸಂತಲಕ್ಷ್ಮಿ ನರಸಿಂಹಾಚಾರಿಯವರಾಗಿದ್ದಾರೆ. ಅವರು ಈ ಕೆಳಗಿನ ಯಾವ ನೃತ್ಯ ಪ್ರಕಾರದಲ್ಲಿ ಪರಿಣಿತರಾಗಿದ್ದಾರೆ ?

(A) ಕೂಚಿಪುಡಿ ಮತ್ತು ಕಥಕ್ಕಳಿ
(B) ಕೂಚಿಪುಡಿ ಮತ್ತು ಭರತನಾಟ್ಯಂ
(C) ಭರತನಾಟ್ಯಂ ಮತ್ತು ಮೋಹಿನಿಅಟ್ಟಂ
(D) ಕಥಕ್ ಮತ್ತು ಮಣಿಪುರಿ

95. ಭಾರತದ ರಾಷ್ಟ್ರೀಯ ಮಹಿಳಾ ಆಯೋಗದ ಈಗಿನ ಅಧ್ಯಕ್ಷ ಯಾರು ?

(A) ಶೋಭಾ ಕರಂದ್ಲಾಜೆ (B) ಖುಷ್ಬೂ ಸುಂದರ್ (C) ಸ್ಮೃತಿ ಇರಾನಿ (D) ರೇಖಾ ಶರ್ಮಾ

96. ಜನವರಿ 2023ರಲ್ಲಿ ದಿ ಶಾಂಘೈ ಕೋಆಪರೇಷನ್ ಆರ್ಗನೈಸೇಷನ್ (SCO) ಚಲನಚಿತ್ರ ಉತ್ಸವ ಮುಂಬಯಿಯಲ್ಲಿ ಜರುಗಿತು. ಈ ಕೆಳಗಿನ ಯಾವ ರಾಷ್ಟ್ರವು SCO ದ ಸದಸ್ಯ ರಾಷ್ಟ್ರವಾಗಿಲ್ಲ ?

(A) ರಷ್ಯಾ (B) ಪಾಕಿಸ್ತಾನ (C) ಬಾಂಗ್ಲಾದೇಶ (D) ಚೀನಾ

97. ಭಾರತ ಸರ್ಕಾರವು ನವೆಂಬರ್ 15 ಅನ್ನು "ಜನಜಾತೀಯ ಗೌರವ ದಿವಸ" ಎಂದು ಘೋಷಿಸಿ ವೀರ ಬುಡಕಟ್ಟಿನ ಸ್ವಾತಂತ್ರ್ಯ ಹೋರಾಟಗಾರರ ನೆನಪಿಗೆ ಈ ದಿವಸವನ್ನು ಮೀಸಲಾಗಿಟ್ಟಿದೆ. ನವೆಂಬರ್ 15 ರಂದು ಕೆಳಗಿನ ಯಾವ ಬುಡಕಟ್ಟಿನ ಸ್ವಾತಂತ್ರ್ಯ ಹೋರಾಟಗಾರನ ಜನ್ಮದಿನವಾಗಿದೆ ?

(A) ಬಿರ್ಸಾ ಮುಂಡಾ
(B) ಜಾತ್ರಾ ಭಗತ್
(C) ತಿರೋಟ್ ಸಿಂಗ್
(D) ಅಲ್ಲೂರಿ ಸೀತಾರಾಮ ರಾಜು

98. ನೀತಿ ಆಯೋಗವು ಈ ಕೆಳಗಿನ ಯಾವ ವಿದೇಶೀ ಸರ್ಕಾರದ ಸಹಯೋಗದೊಂದಿಗೆ ಇಲೆಕ್ಟ್ರಿಕ್ ವಾಹನಗಳ ಕುರಿತು ಒಂದೆಡೆ ಎಲ್ಲಾ ಮಾಹಿತಿಯನ್ನು ಒದಗಿಸುವ ಇ-ಅಮೃತ್ ಪೋರ್ಟಲ್ ಅನ್ನು ಅಭಿವೃದ್ಧಿಪಡಿಸಿ, ಚಾಲನೆಗೆ ತಂದಿದೆ ?

(A) ಜರ್ಮನಿ (B) ಇಸ್ರೇಲ್ (C) ಜಪಾನ್ (D) ಯುನೈಟೆಡ್ ಕಿಂಗ್‌ಡಂ

99. ಆರ್ಥಿಕ ಸಮೀಕ್ಷೆ 2022-23 ರ ಪ್ರಕಾರ ಯಾವ ವರ್ಷದ ವೇಳೆಗೆ ಭಾರತವು ರಾಷ್ಟ್ರೀಯ ಹಸಿರು ಜಲಜನಕ ಮಿಷನ್ (National Green Hydrogen Mission) ಸಹಾಯದಿಂದ ಸ್ವತಂತ್ರ ಇಂಧನ ರಾಷ್ಟ್ರವಾಗುತ್ತದೆ ?

(A) 2025 (B) 2030 (C) 2047 (D) 2050

100. ಈ ಕೆಳಗಿನ ಯಾವ ರಾಜ್ಯಕ್ಕೆ ತೋಟಗಾರಿಕೆಯನ್ನು ಅಭಿವೃದ್ಧಿಪಡಿಸಿದ್ದಕ್ಕಾಗಿ 2022 ನೇ ಸಾಲಿನ ತೋಟಗಾರಿಕೆಯಲ್ಲಿ ಅತ್ಯುತ್ತಮ ರಾಜ್ಯ ಎಂಬ ಪ್ರಶಸ್ತಿಯನ್ನು ನೀಡಲಾಗಿದೆ ?

(A) ಇವ್ಯಾವುದೂ ಅಲ್ಲ (B) ಗೋವಾ (C) ಮಹಾರಾಷ್ಟ್ರ (D) ತಮಿಳುನಾಡು

**Space For Rough Work**



Foreightkas.com
Nov 19, 2023, 12:40
Scanned with OKEN Scanner